ಗ್ರಾಮ ಸಭೆಯನ್ನು ಎಲ್ಲಾ ವಾರ್ಡ್ ಸಭೆಗಳು ಪೂರ್ಣಗೊಂಡ ನಂತರ ಆಯೋಜಿಸಬೇಕು. ಅದಲ್ಲದೇ ಗ್ರಾಮ ಸಭೆಯ ದಿನಾಂಕವನ್ನು ಪೂರ್ವಭಾವಿಯಾಗಿ ನಿಗದಿಪಡಿಸಬೇಕು ಮತ್ತು ವ್ಯಾಪಕವಾಗಿ ಪ್ರಚಾರವನ್ನು ನೀಡಬೇಕು. ಎಲ್ಲಾ ಇಲಾಖೆಗಳ ಕ್ಷೇತ್ರಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯತಿ ಸದಸ್ಯರುಗಳು ಮತ್ತು ಕಾರ್ಯತಂಡದ ಸದಸ್ಯರುಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳಬೇಕು. ಆ ಪ್ರದೇಶದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರುಗಳನ್ನು ಅವಶ್ಯಕವಾಗಿ ಸಭೆಗೆ ಆಹ್ವಾನಿಸಬೇಕು ಮತ್ತು ಮೇಲಿನ ಹಂತದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದರ ಕುರಿತು ಅವರುಗಳ ಬದ್ಧತೆಯನ್ನು ವ್ಯಕ್ತಪಡಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕು.

ಗ್ರಾಮ ಸಭೆಯನ್ನು ಆಯೋಜನೆ ಮಾಡಬೇಕಾದರೆ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ಗ್ರಾಮ ಸಭೆಗೆ ಪೂರ್ವಭಾವಿಯಾಗಿ, ಗ್ರಾಮ ಪಂಚಾಯತಿ ಮತ್ತು ಕಾರ್ಯತಂಡದ ಎಲ್ಲಾ ಸದಸ್ಯರುಗಳನ್ನು ಅನೌಪಚಾರಿಕವಾಗಿ ಭೇಟಿ ಮಾಡಬೇಕು. ಗ್ರಾಮ ಸಭೆಯಲ್ಲಿ ಕರಡು ಯೋಜನೆಯನ್ನು ಮಂಡಿಸಲು ನಿರ್ಧರಿಸುವ ಮುನ್ನ ಜನರ ಆದ್ಯತೆ ಮತ್ತು ಬೇಡಿಕೆಗಳ ಕುರಿತು ಚರ್ಚಿಸಬೇಕು.

2. ವಾರ್ಡ್‌ವಾರು ಆದ್ಯತಾ ಪಟ್ಟಿಯನ್ನು ಯಾವುದಾದರೂ ವಾರ್ಡ್‌ನ ಸದಸ್ಯರು ಮಂಡಿಸಬೇಕು. ಒಂದು ವೇಳೆ ಯಾವುದಾದರು ಕಾರಣಗಳಿಗೆ ಮಂಡಿಸಲು ಸಾಧ್ಯವಾಗದಿದ್ದರೆ, ಕಾರ್ಯಗುಂಪಿನ ಸದಸ್ಯರು ಮಂಡಿಸಬೇಕು.

3. ಪ್ರತಿ ವಾರ್ಡ್‌ನ ವಲಯವಾರು ಬೇಡಿಕೆಗಳನ್ನು ಬೇರೆ ಬೇರೆಯಾಗಿ ಮಂಡಿಸಬೇಕು. ಯಾವುದೇ ರೀತಿಯ ತಿದ್ದುಪಡಿಗಳು ಮತ್ತು ಸೇರ್ಪಡೆಗಳನ್ನು ಗ್ರಾಮ ಸಭೆಯು ಸೂಚಿಸಿದರೆ ಅವುಗಳನ್ನು ಚರ್ಚಿಸಿ ದಾಖಲಿಸಬೇಕು. ಹೆಚ್ಚಿನ ಸಂಖ್ಯೆಯ ಬೆಂಬಲದೊಂದಿಗೆ ಮಾತ್ರ ಆದ್ಯತೆಗಳನ್ನು ಕೈಬಿಡುವುದು ಅಥವಾ ಬದಲಿಸುವುದರ ನಿರ್ಧಾರವನ್ನು ತೆಗೆದುಕೊಳ್ಳಬೇಕು.

4. ಎಲ್ಲಾ ವಾರ್ಡ್‌ಗಳಿಗೆ ಸಂಬಂಧಿಸಿದಂತೆ ಮೂರು ವಲಯಗಳ ಕರಡು ಅಭಿವೃದ್ಧಿ ಯೋಜನೆಯನ್ನು ಮಂಡಿಸಿದ ನಂತರ ಚರ್ಚಿಸಬೇಕು. ನಂತರದಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮುಂದಿನ ಸಾಲಿನಲ್ಲಿ ಅನುಷ್ಠಾನ ಮಾಡಬಹುದಾದ ಕಾರ್ಯಕ್ರಮಗಳು ಮತ್ತು

ಅಭಿವೃದ್ಧಿ ಕಾಮಗಾರಿಗಳನ್ನು ಕ್ರೋಢಿಕರಿಸಿ ಯೋಜನೆಯನ್ನು ಸಿದ್ದಪಡಿಸಬೇಕು. ಅದಾಗ್ಯೂ, ವಾರ್ಡ್ ಸಭೆಗಳಲ್ಲಿ ನಿರ್ಧರಿತವಾದ ಆದ್ಯತೆಗಳು ಮತ್ತು ಅಂತಿಮ ಆದ್ಯತೆಗಳ ನಡುವೆ ಯಾವುದೇ ರೀತಿಯ ಭಿನ್ನತೆಗಳಿಲ್ಲದಂತೆ ಎಚ್ಚರಿಕೆ ವಹಿಸಬೇಕು.

5. **ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನೇಕ ಯೋಜನೆಗಳು ಗ್ರಾಮ ಮಟ್ಟದಲ್ಲಿ ಅನುಷ್ಠಾನವಾಗುತ್ತಿದ್ದು ಇವುಗಳಿಗೆ ಸಂಬಂಧಿಸಿದಂತೆ ವೈಯಕ್ತಿಕ ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಬೇಕಾಗಿರುತ್ತದೆ. ಪ್ರತಿ ಇಲಾಖೆಯ ಯೋಜನೆಗಳಿಗೆ ಸಂಬಂಧಿಸಿದಂತೆ ವಾರ್ಡ್‌ಗಳಿಂದ ವೈಯಕ್ತಿಕ ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಿ ನಂತರ ಗ್ರಾಮ ಸಭೆಯಲ್ಲಿ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಯೋಜನೆಗಳ ವೈಯಕ್ತಿಯ ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಲು ಪ್ರತ್ಯೇಕವಾದ ಗ್ರಾಮ ಸಭೆಯನ್ನು ಆಯೋಜಿಸಬೇಕಾಗಿರುತ್ತದೆ.**

6. ಗ್ರಾಮ ಸಭೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಅಂತಿಮಗೊಳಿಸುವಾಗ ದುಡ್ಡಿಲ್ಲದೇ ಮಾಡಬಹುದಾದ ಅಭಿವೃದ್ಧಿ ಕೆಲಸಗಳತ್ತ ಕೂಡಾ ಗಮನಹರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು 2003ರಲ್ಲಿ ಹೊರಡಿಸಿರುವ ಆದೇಶದ ಜೊತೆಗೆ ಹೆಚ್ಚುವರಿ ಚಟುವಟಿಕೆಗಳನ್ನು ಸೇರಿಸಿಕೊಳ್ಳಬಹುದು.

| **ಗ್ರಾಮ ಪಂಚಾಯತಿಗಳು ಕಡಿಮೆ ಖರ್ಚಿನಲ್ಲಿ ಅಥವಾ ದುಡ್ಡಿಲ್ಲದೆ ಮಾಡಬಹುದಾದ ಅಭಿವೃದ್ಧಿ ಚಟುವಟಿಕೆಗಳು** | **ಕೋಡ್ ಸಂಖ್ಯೆ** |
|---|---|
| • 6 ರಿಂದ 14 ನೇ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ಕಡ್ಡಾಯವಾಗಿ ದಾಖಲಾಗುವಂತೆ ನೋಡಿಕೊಳ್ಳುವುದು. | **01** |
| • ಶಾಲೆಗೆ ದಾಖಲಾಗದೇ ಇರುವ ಮಕ್ಕಳನ್ನು ಗುರುತಿಸಿ ಅವರ ಪೋಷಕರನ್ನು ಉತ್ತೇಜಿಸುವ ಮೂಲಕ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳುವುದು. | **02** |
| • ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಬಾಲಕಾರ್ಮಿಕರನ್ನು ಗುರುತಿಸುವುದು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು. | **03** |
| • ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜೀತದಾಳುಗಳನ್ನು ಗುರುತಿಸುವುದು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು. | **04** |
| • ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಗಳಲ್ಲಿ ಆರೋಗ್ಯ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಚರ್ಚಿಸುವುದು ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸತತವಾಗಿ ಚರ್ಚಿಸುವುದು. | **05** |

| | |
|---|---|
| • ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಮಕ್ಕಳಿಗೆ ದೊರೆಯುವ ಸೌಲಭ್ಯಗಳು ಸರಿಯಾಗಿ ದೊರೆಯುವಂತೆ ನೋಡಿಕೊಳ್ಳುವುದು. | **06** |
| • ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರಿಗೆ ಸೂಕ್ತ ಸೌಲಭ್ಯಗಳು ದೊರೆಯುವಂತೆ ನೋಡಿಕೊಳ್ಳುವುದು. | **07** |
| • ವಿವಿಧ ಅಭಿವೃದ್ಧಿ ಯೋಜನೆಗಳ ವೈಯಕ್ತಿಕ ಫಲಾನುಭವಿಗಳನ್ನು ಗುರುತಿಸಲು ಪ್ರೋತ್ಸಾಹಿಸುವುದು. | **08** |
| • ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿಯರಿಗೆ ಸೂಕ್ತ ಸೌಲಭ್ಯಗಳನ್ನು ಅಂಗನವಾಡಿ ಕೇಂದ್ರಗಳಿಂದ ದೊರೆಯುವಂತೆ ನೋಡಿಕೊಳ್ಳುವುದು. | **09** |
| • ಶೇ.100ರಷ್ಟು ಸಾಂಸ್ಥಿಕ ಹೆರಿಗೆಗಳು ಆಗುವಂತೆ ನಿಗಾ ವಹಿಸುವುದು. | **10** |
| • ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಅಂಗನವಾಡಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ಸೌಲಭ್ಯ ದೊರೆಯುವಂತೆ ನಿಗಾ ವಹಿಸುವುದು. | **11** |
| • ತಾಯಿ ಮರಣ ಮತ್ತು ಶಿಶು ಮರಣಗಳನ್ನು ಮೇಲಿನ ಹಂತದ ಅಧಿಕಾರಿಗಳ ಗಮನಕ್ಕೆ ತರುವುದು ಮತ್ತು ಅದರ ಮೇಲೆ ನಿಗಾ ವಹಿಸುವುದು. | **12** |
| • ಶಾಲಾ ಮಕ್ಕಳ ಸತತ ಆರೋಗ್ಯ ತಪಾಸಣೆ ನಡೆಸುವುದು. | **13** |
| • ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ನೀಡಲಾಗುವ ಮಧ್ಯಾಹ್ನದ ಬಿಸಿಯೂಟ ಮತ್ತು ಪೌಷ್ಠಿಕ ಆಹಾರದ ವಿತರಣೆಯನ್ನು ಮೇಲ್ವಿಚಾರಣೆ ಮಾಡುವುದು | **14** |
| • ಸಾಮಾಜಿಕ ಭದ್ರತಾ ಯೋಜನೆಗಳಿಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು. | **15** |
| • ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ ಮತ್ತು ಇತರೆ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಗುರುತಿಸಿ ಪ್ರೋತ್ಸಾಹಿಸುವುದು. | **16** |
| • ಶಾಲೆಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿ ಬಹುಮಾನಗಳನ್ನು ನೀಡುವುದು. | **17** |
| • ಪಡಿತರ ಅಂಗಡಿಗಳಲ್ಲಿ ಸರಿಯಾಗಿ ಆಹಾರ ಧಾನ್ಯಗಳ ವಿತರಣೆಯಾಗುವಂತೆ ನಿಗಾ ವಹಿಸುವುದು. | **18** |
| • ಗ್ರಾಮಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ದಾಖಲಿಸುವುದು ಮತ್ತು ಸಂರಕ್ಷಣೆ ಮಾಡುವುದು. | **19** |
| • ಶುಚಿತ್ವ ದಿನಾಚರಣೆಗಳನ್ನು, ಗ್ರಾಮ ಪಂಚಾಯಿತ್‌ಗಳಲ್ಲಿ ಆಯೋಜಿಸುವುದು ಮತ್ತು ಸಮುದಾಯದಲ್ಲಿ ಅರಿವು ಮುಡಿಸುವುದು. | **20** |

| | |
|---|---|
| • ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಗತಿಕರನ್ನು ಗುರುತಿಸುವುದು ಮತ್ತು ಅವರ ರಕ್ಷಣೆಗೆ ಕ್ರಮ ಕೈಗೊಳ್ಳುವುದು. | **21** |
| • ಗ್ರಾಮಗಳಲ್ಲಿನ ಸಾಂಕ್ರಾಮಿಕ ರೋಗಗಳು ಹಾಗೂ ಇತರೆ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು, ಸಂಬಂಧಪಟ್ಟವರ ಗಮನಕ್ಕೆ ತರುವುದು. | **22** |
| • ಬರ, ಪ್ರವಾಹ ಮತ್ತು ಇತರೆ ನೈಸರ್ಗಿಕ ಅನಾಹುತಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮೇಲಿನ ಅಧಿಕಾರಿಗಳ ಗಮನಕ್ಕೆ ತರುವುದು. | **23** |
| • ಮಹಿಳೆಯರ ಮೇಲಿನ ದೌರ್ಜನ್ಯ, ವರದಕ್ಷಿಣೆ ಪಿಡುಗು ಮತ್ತು ರೈತರ ಆತ್ಮಹತ್ಯೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪಂಚಾಯಿತಿಯಲ್ಲಿ ಚರ್ಚಿಸಿ, ಮೇಲಿನ ಅಧಿಕಾರಿಗಳ ಗಮನಕ್ಕೆ ತರುವುದು. | **24** |
| • ಗ್ರಾಮಗಳಲ್ಲಿ ನಡೆಯುವ ಜಾತ್ರೆ, ಹಬ್ಬ ಮತ್ತು ಇತರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು. | **25** |

ಈ ಮೇಲೆ ತಿಳಿಸಿದ ದುಡ್ಡಿಲ್ಲದೇ ಮಾಡಬಹುದಾದ ಅಥವಾ ಕಡಿಮೆ ವೆಚ್ಚದಲ್ಲಿ ತೆಗೆದುಕೊಳ್ಳಬಹುದಾದ ವಾರ್ಡ್‌ವಾರು, ಗ್ರಾಮವಾರು ಚಟುವಟಿಕೆಗಳನ್ನು ಈ ಕೆಳಕಂಡ ನಮೂನೆ–3ರಲ್ಲಿ ಸಿದ್ದಪಡಿಸತಕ್ಕದ್ದು.

**ನಮೂನೆ – 3 ದುಡ್ಡಿಲ್ಲದೇ ಅಥವಾ ಕಡಿಮೆ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಗುರುತಿಸಿದ ಚಟುವಟಿಕೆಗಳು**

ಜಿಲ್ಲೆ ಹೆಸರು :

ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು :

| ಕ್ರ.ಸಂ | ಗ್ರಾಮ | ವಾರ್ಡ್ ಸಂಖ್ಯೆ | ಗುರುತಿಸಲ್ಪಟ್ಟಿರುವ ಚಟುವಟಿಕೆಗಳ ಕೋಡ್ ಸಂಖ್ಯೆ | ಫಲಾನುಭವಿ/ಅರ್ಹ ವ್ಯಕ್ತಿಗಳ ವಿವರ | ಸಂಬಂಧಿತ ಇಲಾಖೆ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

7. ಕರಡು ಯೋಜನೆ ಅಥವಾ ಅಭಿವೃದ್ಧಿ ಮುನ್ನೋಟದ ವರದಿಯು ಕೂಲಂಕುಷವಾಗಿ ಗ್ರಾಮ ಸಭೆಯಲ್ಲಿ ಚರ್ಚಿಸಿ ಅನುಮೋದಿತವಾಗಬೇಕು, ಹಾಗೂ ಗ್ರಾಮ ಸಭೆಯು ಇವುಗಳನ್ನು ಅನುಷ್ಠಾನ ಮಾಡಲು ನಿರ್ಣಯಗಳನ್ನು ಕೈಗೊಳ್ಳಬೇಕು.

8. ಗ್ರಾಮ ಸಭೆಯಲ್ಲಿ ಚರ್ಚಿಸಿ ಗುರುತಿಸಿದ ಎಲ್ಲಾ ಕಾಮಗಾರಿಗಳು ಮತ್ತು ಯೋಜನೆಗಳನ್ನು ಆದ್ಯತಾವಾರು ನಮೂನೆ –4ರಲ್ಲಿ ಸಿದ್ದಪಡಿಸತಕ್ಕದ್ದು.

9. ಗ್ರಾಮ ಸಭೆಯಲ್ಲಿ ಕೈಗೊಳ್ಳುವ ಎಲ್ಲಾ ನಿರ್ಧಾರಗಳನ್ನು ಅಲ್ಲಿಯೇ ಓದಿ ಯಥಾವತ್ತಾಗಿ ದಾಖಲಿಸಬೇಕು.

**ನಮೂನೆ – 4 ಗ್ರಾಮ ಸಭೆಯಲ್ಲಿ ಗುರುತಿಸಿದ ಕಾಮಗಾರಿಗಳು, ಯೋಜನೆಗಳು ಮತ್ತು ಆದ್ಯತೆ**

ಜಿಲ್ಲೆ ಹೆಸರು :

ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು :

| ಕ್ರ.ಸಂ | ಗ್ರಾಮ | ವಾರ್ಡ್ ಸಂಖ್ಯೆ | ಬೇಡಿಕೆಗಳು | ಗುರುತಿಸಲ್ಪಟ್ಟಿರುವ ಕಾಮಗಾರಿಗಳು | ಸಂಬಂಧಿತ ಇಲಾಖೆ | ಯೋಜನೆಗಳು | ಗ್ರಾಮ ಸಭೆಯ ಆದ್ಯತೆ | ವರ್ಷವನ್ನು ದಾಖಲಿಸಿ (2015ರಿಂದ 2020ರವರೆಗೆ) |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

### 2.2.9 : ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿ ಸಭೆ

ಜನರ ಬೇಡಿಕೆಗಳು ಸರ್ಕಾರದ ಯೋಜನೆಗಳಡಿಯಲ್ಲಿಯೇ ಬರುವುದರಿಂದ ಈ ಸಭೆಯಲ್ಲಿ ವಿವಿಧ ಇಲಾಖೆಗಳು ಭಾಗವಹಿಸುವುದು ಬಹು ಮುಖ್ಯವಾದುದ್ದು. ಕಾರ್ಯಾಚರಣೆಯಲ್ಲಿರುವ ಕಾರ್ಯಕ್ರಮಗಳನ್ನು ಗುರುತಿಸಲು, ಅಗತ್ಯವಿರುವ ಅನುದಾನಗಳ ಲಭ್ಯತೆಯ ವಿವರ, ಯಾವ ಯಾವ ಬೇಡಿಕೆಗಳು ಯಾವ ಕಾರ್ಯಕ್ರಮಗಳಡಿಯಲ್ಲಿ ಬರುತ್ತವೆ ಮುಂತಾದವುಗಳನ್ನು ಖಚಿತಪಡಿಸಿಕೊಳ್ಳಲು ಈ ಸಭೆ ಅಧಿಕಾರಿಗಳಿಗೆ ಉಪಯುಕ್ತವಾಗಿದೆ. ಈ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಕಿರಿಯ ಆರೋಗ್ಯ ಸಹಾಯಕರು, ಶಾಲಾ ಮುಖ್ಯೋಪಾಧ್ಯಾಯರು, ಗ್ರಾಮ ಲೆಕ್ಕಿಗರು, ಮತ್ತು ವಿವಿಧ ಇಲಾಖೆಗಳ ತಳಹಂತದ ಅಧಿಕಾರಿಗಳು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಿರಿಯ ಇಂಜಿನಿಯರ್ ಮುಂತಾದವರನ್ನು ಒಳಗೊಂಡಿರಬೇಕು. ಈ ಸಭೆಯು ಗ್ರಾಮಸಭೆಯಿಂದ ಸಲ್ಲಿಸಲ್ಪಟ್ಟಿರುವ ಬೇಡಿಕೆ ಪಟ್ಟಿಯ ಬಗ್ಗೆ ಚರ್ಚಿಸಬೇಕು ಮತ್ತು ಗ್ರಾಮ ಪಂಚಾಯತಿ ಅನುದಾನದಡಿ ಮಾಡಬಹುದಾದ ಕೆಲಸಗಳನ್ನು ಗುರುತಿಸಬೇಕು. ಈ ಕಮಿಟಿಯು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲಿ ಮಾಡಬಹುದಾದ ಕೆಲಸಗಳನ್ನು ಕೂಡ ಗುರುತಿಸಬೇಕಾಗುತ್ತದೆ. ಪ್ರತಿ ಹಂತದ ಕೆಲಸಗಳಿಗೂ ಪ್ರತ್ಯೇಕವಾದ ಪಟ್ಟಿಯನ್ನು ಸಿದ್ದಪಡಿಸಬೇಕಾಗುತ್ತದೆ. ಕಮಿಟಿಯು ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಾಡಬಹುದಾದ ಕೆಲಸಗಳ ವೆಚ್ಚವನ್ನು ಸಿದ್ದಪಡಿಸಬೇಕಾಗುತ್ತದೆ. ಗ್ರಾಮ ಪಂಚಾಯತಿ ಕೋರ್ ಕಮಿಟಿಯು ಮಾಡಬಹುದಾದ ಕೆಲಸಗಳನ್ನು ಬೇರೆಬೇರೆ ಸ್ಥರಗಳಲ್ಲಿ, ಭಾಗ–ಎ, ಭಾಗ-ಬಿ, ಭಾಗ-ಸಿ ಮತ್ತು ಭಾಗ–ಡಿ. ಹೀಗೆ ಗುರುತಿಸಬೇಕಾಗುತ್ತದೆ. ಭಾಗ – ಎ ನಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿ ಸಂಪನ್ಮೂಲ ಗುಚ್ಛದಿಂದ ಮಾಡಬಹುದಾದ ಕೆಲಸಗಳನ್ನು ಒಳಗೊಂಡಿರುತ್ತದೆ. ಭಾಗ–ಬಿ ನಲ್ಲಿ ತಾಲ್ಲೂಕು ಪಂಚಾಯತಿ ಯೋಜನೆಗಳಡಿ ಮಾಡಬಹುದಾದ ಕೆಲಸಗಳನ್ನು ಗುರುತಿಸುತ್ತದೆ. ಭಾಗ–'ಸಿ'ಯು ಜಿಲ್ಲಾ ಪಂಚಾಯತಿ ಯೋಜನೆಗಳಡಿ ಮಾಡಬಹುದಾದ ಕೆಲಸಗಳನ್ನು ಗುರುತಿಸುತ್ತದೆ. ಭಾಗ–'ಡಿ'ಯು ರಾಜ್ಯ ವಲಯದ ಯೋಜನೆಗಳಡಿ ಮಾಡಬಹುದಾದ ಕೆಲಸಗಳನ್ನು ಗುರುತಿಸುತ್ತದೆ. ಈ ಕೋರ್ ಕಮಿಟಿಯು ಭಾಗ–ಎ, ಭಾಗ-ಬಿ, ಭಾಗ–ಸಿ ಮತ್ತು ಭಾಗ–'ಡಿ'ಯನ್ನು ಗ್ರಾಮ ಪಂಚಾಯತಿ ಸಭೆಗೆ ಅಂತಿಮ ಅನುಮೋದನೆಗೆ ಕಳಿಸುತ್ತದೆ. ಗ್ರಾಮ ಪಂಚಾಯತಿಯು ಭಾಗ –ಎ ಯನ್ನು ಅನುಮೋದಿಸಬಹುದು ಹಾಗೂ ಭಾಗ–ಬಿ, ಭಾಗ–ಸಿ, ಭಾಗ–ಡಿ ಯನ್ನು ತಾಲ್ಲೂಕು ಮಟ್ಟದ ಕೋರ್ ಕಮಿಟಿಗೆ ಶಿಫಾರಸ್ಸು ಮಾಡಬಹುದು. ಇವುಗಳು ನಮೂನೆ 5 ರಲ್ಲಿರುವ ಮಾಹಿತಿಗಳೊಂದಿಗೆ ಕಳಿಸಲಾಗುತ್ತದೆ.

## ನಮೂನೆ – 5 ಗ್ರಾಮ ಪಂಚಾಯಿತಿ ಮಟ್ಟದ ಕೋರ್ ಕಮಿಟಿಯಲ್ಲಿ ಗುರುತಿಸಿದ ಕಾಮಗಾರಿಗಳು

ಜಿಲ್ಲೆಯ ಹೆಸರು :

ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು :

ಗ್ರಾಮದ ಹೆಸರು :

(ಗ್ರಾಮ ಸಭೆಯಲ್ಲಿ ಈಗಾಗಲೇ ಅಂತಿಮಗೊಳಿಸಲಾಗಿರುವ ಚಟುವಟಿಕೆಗಳಿಗೆ ಈ ಕೆಳಕಂಡ ವಿವರಗಳನ್ನು ಗ್ರಾಮ ಪಂಚಾಯಿತಿಯ ಕೋರ್ ಕಮಿಟಿ ಸಭೆಯಲ್ಲಿ ಅಂತಿಮಗೊಳಿಸುವುದು.)

| ಕ್ರ.ಸಂ | ಕಾಮಗಾರಿಗಳು | ಅಂದಾಜು ಮೊತ್ತ | ಸಂಬಂಧಿತ ಇಲಾಖೆ | ಗ್ರಾ.ಪಂ/ ತಾ.ಪಂ / ಜಿ.ಪಂ/ ರಾಜ್ಯ ವಲಯ |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

### 2.2.10 : ಗ್ರಾಮ ಪಂಚಾಯತಿ ಸಾಮಾನ್ಯ ಸಭೆ

ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿಯಲ್ಲಿ ಅಂತಿಮಗೊಂಡ ಕಾಮಗಾರಿಗಳ/ಕೆಲಸಗಳ ಪಟ್ಟಿಯ ಬಗ್ಗೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆಯತ್ತದೆ ಹಾಗೂ ಗ್ರಾಮ ಪಂಚಾಯತಿಯ ಸಂಪನ್ಮೂಲ ಗುಚ್ಛದೊಳಗೆ ಮಾಡಬೇಕಾದ ಕಾಮಗಾರಿಗಳಿಗೆ ಅನುಮೋದನೆ ನೀಡುತ್ತದೆ. ಇತರೆ ಎಲ್ಲಾ ಕಾಮಗಾರಿಗಳನ್ನು ತಾಲ್ಲೂಕು ಕೋರ್ ಕಮಿಟಿಗೆ ಕಳಿಸಲಾಗುತ್ತದೆ. ಮಾಡಬೇಕಾದ ಕೆಲಸಗಳ ಅಂತಿಮ ಪಟ್ಟಿ ಮತ್ತು ವಿವರಗಳನ್ನು ಭಾಗ–ಎನಲ್ಲಿ ನೀಡಬೇಕಾಗುತ್ತದೆ.

# ಭಾಗ –ಎ  ಗ್ರಾಮ ಪಂಚಾಯಿತಿ ಸಭೆಯಲ್ಲಿ ಅನುಮೋದಿಸಿದ ಗ್ರಾಮ ಪಂಚಾಯತ್ ಮಟ್ಟದ ಕಾಮಗಾರಿಗಳ ಆಯವ್ಯಯ

ಜಿಲ್ಲೆ ಹೆಸರು : ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು : ಗ್ರಾಮದ ಹೆಸರು : ವಾರ್ಡ್ ಸಂಖ್ಯೆ :

| ಕ್ರ.ಸಂ | ಕಾಮಗಾರಿಗಳು | ಮೊತ್ತ | ಅನುದಾನದ ಮೂಲ | | | | | | | ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ | ಫಲಿತಾಂಶ |
|---|---|---|---|---|---|---|---|---|---|---|---|
| | | | ಎಂ.ಜಿ.ಎನ್. ಆರ್.ಇ.ಜಿ.ಎ | ಶಾಸನ ಬದ್ಧ ಅನುದಾನ | ಸ್ವಂತ ಸಂಪನ್ಮೂಲ | 14ನೇ ಹಣಕಾಸು ಅನುದಾನ | ಸ್ವಚ್ಛ ಭಾರತ ಅಭಿಯಾನ | ಕುಡಿಯುವ ನೀರಿನ ನಿರ್ವಹಣೆ ಅನುದಾನ | ಇತರೆ | | |
| ಅನುಷ್ಠಾನ ಮಾಡಲು ಅಂತಿಮಗೊಳಿಸಿದ ಪಟ್ಟಿ | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| ಅನುಷ್ಠಾನ ಮಾಡದೇ ಬಾಕಿ ಉಳಿದಿರುವ ಪಟ್ಟಿ (**Pending list**) | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |

**2.2.11 : ತಾಲ್ಲೂಕು ಮಟ್ಟದ ಕೋರ್‌ಕಮಿಟಿ ಸಭೆ**

ತಾಲ್ಲೂಕು ಮಟ್ಟದ ಕೋರ್ ಕಮಿಟಿಯು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳಿಂದ ಮೇಲಿನ ಹಂತದ ಎಲ್ಲಾ ಕಾಮಗಾರಿಗಳ ಪಟ್ಟಿಯನ್ನು ಸ್ವೀಕರಿಸುತ್ತದೆ. ಸಂಬಂಧಿತ ಇಲಾಖೆಗಳನ್ನು ಹೊಂದಿರುವ ಕಮಿಟಿಯು ಭಾಗ–ಬಿ, ಭಾಗ–ಸಿ ಮತ್ತು ಭಾಗ–ಡಿ'ಗಳಡಿಯಲ್ಲಿ ಬರುವ ಪ್ರಸ್ತಾವನೆಗಳನ್ನು ತಾಂತ್ರಿಕ ಪರಿಶೀಲನೆಗೊಳಿಸಿ ಭಾಗ–'ಬಿ'ಯನ್ನು ತಾಲ್ಲೂಕು ಪಂಚಾಯತಿ ಅನುಮೋದನೆಗೆ ಸಲ್ಲಿಸುತ್ತದೆ.

**2.2.12 : ತಾಲ್ಲುಕು ಪಂಚಾಯತಿ ಸಾಮಾನ್ಯ ಸಭೆ**

ತಾಲ್ಲೂಕು ಪಂಚಾಯತಿ ಮಟ್ಟದ ಕೋರ್ ಕಮಿಟಿಯಲ್ಲಿ ಅಂತಿಮಗೊಂಡ ಕಾಮಗಾರಿಗಳ/ಕೆಲಸಗಳ ಪಟ್ಟಿಯ ಬಗ್ಗೆ ತಾಲ್ಲೂಕು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆಯತ್ತದೆ ಹಾಗೂ ತಾಲ್ಲೂಕು ಪಂಚಾಯತಿಯ ಸಂಪನ್ಮೂಲ ಗುಚ್ಛದೊಳಗೆ ಮಾಡಬೇಕಾದ ಕಾಮಗಾರಿಗಳಿಗೆ ಅನುಮೋದನೆ ನೀಡುತ್ತದೆ. ಅನುಮೋದನೆಗೊಂಡ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಿತ ಗ್ರಾಮ ಪಂಚಾಯತಿಗಳಿಗೆ ಮಾಹಿತಿಗಾಗಿ ಕಳಿಸಲಾಗುತ್ತದೆ. ಭಾಗ–ಸಿ ಮತ್ತು ಭಾಗ–ಡಿ ನಲ್ಲಿರುವ ಇತರೆ ಕಾಮಗಾರಿಗಳನ್ನು ಜಿಲ್ಲಾ ಮಟ್ಟದ ಕೋರ್ ಕಮಿಟಿಗೆ ಕಳಿಸಲಾಗುತ್ತದೆ. ತಾಲ್ಲೂಕು ಪಂಚಾಯತಿ ಯೋಜನೆಯಡಿ ಮಾಡಬೇಕಾದ ಕೆಲಸಗಳ ಅಂತಿಮ ಪಟ್ಟಿ ಮತ್ತು ವಿವರಗಳನ್ನು ಭಾಗ–ಬಿ ನಲ್ಲಿರುವಂತೆ ನೀಡಬೇಕಾಗುತ್ತದೆ.

## ಭಾಗ –ಬಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲ್ಪಟ್ಟ ತಾಲ್ಲೂಕು ಪಂಚಾಯಿತಿ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ವಿವರ

ಜಿಲ್ಲೆಯ ಹೆಸರು : ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು :

| ಕ್ರ.ಸಂ | ವಲಯ/ಕ್ಷೇತ್ರ | ಕಾಮಗಾರಿಗಳು | ಒಟ್ಟು ಮೊತ್ತ | ಗ್ರಾಮ ಪಂಚಾಯಿತಿಯ ಹೆಸರು | ಅವಶ್ಯಕ ಹಣಕಾಸನ್ನು ಒದಗಿಸುವ ಯೋಜನೆಗಳ ಹೆಸರು | | | | | | ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ | ಫಲಿತಾಂಶ |
|---|---|---|---|---|---|---|---|---|---|---|---|---|
| | | | | | ಯೋಜನೆ 1 | ಮೊತ್ತ | ಯೋಜನೆ 2 | ಮೊತ್ತ | ಯೋಜನೆ 3 | ಮೊತ್ತ | | |
| ಅನುಷ್ಠಾನಗೊಳಿಸಲು ಅಂತಿಮಗೊಳಿಸಿದ ಪಟ್ಟಿ | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| ಅನುಷ್ಠಾನಗೊಳಿಸದೆ ಬಾಕಿ ಉಳಿದಿರುವ ಪಟ್ಟಿ (**Pending list**) | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

**2.2.13 : ಜಿಲ್ಲಾ ಮಟ್ಟದ ಕೋರ್‌ಕಮಿಟಿ ಸಭೆ**

ಜಿಲ್ಲಾ ಮಟ್ಟದ ಕೋರ್ ಕಮಿಟಿಯು ತಾಲ್ಲೂಕು ಪಂಚಾಯತಿಗಳಿಂದ ಸಲ್ಲಿಸಲ್ಪಟ್ಟ ಕಾಮಗಾರಿಗಳ ಪಟ್ಟಿಯ ಬಗ್ಗೆ ಚರ್ಚೆ ನಡೆಸಬೇಕಾಗುತ್ತದೆ. ಈ ಕಮಿಟಿಯು ಜಲ್ಲಾ ಪಂಚಾಯತಿ ಯೋಜನೆಯಡಿ ಅಥವಾ ಸಂಬಂಧಿತ ಇಲಾಖೆಗಳ ಜಿಲ್ಲಾ ವಲಯದ ಖರ್ಚುವೆಚ್ಚಗಳಡಿಯಲ್ಲಿ ಮಾಡಬಹುದಾದ ಕಾಮಗಾರಿಗಳನ್ನು ಭಾಗ–'ಸಿ'ನಲ್ಲಿ ಗುರುತಿಸುತ್ತದೆ. ಇವುಗಳನ್ನು ಕೋರ್ ಕಮಿಟ ಸಭೆಯಲ್ಲಿ ಅಂತಿಮಗೊಳಿಸಲಾಗುತ್ತದೆ ಹಾಗೂ ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯತಿವಾರು ಅಂತಿಮಗೊಂಡ ಕಾಮಗಾರಿಗಳ ಪಟ್ಟಿಯನ್ನು ಅನುಮೋದನೆಗಾಗಿ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಇಡಬೇಕಾಗುತ್ತದೆ. ಭಾಗ–'ಡಿ'ನಲ್ಲಿ ಬರುವ ಸಂಬಂಧಿತ ಇಲಾಖೆಗಳು ಮಾಡಬೇಕಾದ ಇತರೆ ಎಲ್ಲಾ ಕಾಮಗಾರಿಗಳನ್ನು ರಾಜ್ಯಮಟ್ಟದ ಅಥವಾ ಇತರೆ ಇಲಾಖೆಗಳಿಗೆ ಕಳುಹಿಸಲು ಕ್ರಮವಹಿಸಬೇಕಿದೆ.

**2.2.14 ಜಿಲ್ಲಾ ಪಂಚಾಯತಿ ಸಾಮಾನ್ಯಸಭೆ**

ಜಿಲ್ಲಾ ಪಂಚಾಯತಿ ಮಟ್ಟದ ಕೋರ್ ಕಮಿಟಿಯಲ್ಲಿ ಅಂತಿಮಗೊಂಡ ಕಾಮಗಾರಿಗಳ ಪಟ್ಟಿಯ ಬಗ್ಗೆ ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆಯಬೇಕು. ಈ ಸಭೆಯು ಜಿಲ್ಲಾ ಪಂಚಾಯತಿಯ ಸಂಪನ್ಮೂಲ ಗುಚ್ಛದೊಳಗೆ ಮಾಡಬೇಕಾದ ಕಾಮಗಾರಿಗಳಿಗೆ ಭಾಗ–'ಸಿ'ನಲ್ಲಿ ಅನುಮೋದನೆ ನೀಡುತ್ತದೆ. ಇತರೆ ಎಲ್ಲಾ ಕಾಮಗಾರಿಗಳನ್ನು ಸಂಬಂಧಿತ ಇಲಾಖೆಗಳ ಮೂಲಕ ಮೇಲಿನ ಹಂತಕ್ಕೆ ಕಳುಹಿಸಲಾಗುತ್ತದೆ. ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿವಾರು ಮಾಡಬೇಕಾದ ಕಾಮಗಾರಿಗಳ ಅಂತಿಮ ಪಟ್ಟಿ ಹಾಗೂ ಅದರ ವಿವರಗಳನ್ನು ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ಭಾಗ–ಸಿ ನಲ್ಲಿರುವಂತೆ ಕಳುಹಿಸಲಾಗುತ್ತದೆ.

## ಭಾಗ –ಸಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಲ್ಪಟ್ಟ ಜಿಲ್ಲಾ ಪಂಚಾಯಿತಿ ಯೋಜನೆಯ ಕಾಮಗಾರಿಗಳ ವಿವರ

ಜಿಲ್ಲೆಯ ಹೆಸರು : ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು :

| ಕ್ರ.ಸಂ | ವಲಯ/ಕ್ಷೇತ್ರ | ಕಾಮಗಾರಿಗಳು | ಒಟ್ಟು ಮೊತ್ತ | ತಾಲ್ಲೂಕು ಪಂಚಾಯಿತಿಯ ಹೆಸರು | ಅವಶ್ಯಕ ಹಣಕಾಸನ್ನು ಒದಗಿಸುವ ಯೋಜನೆಗಳ ಹೆಸರು | | | | | | ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ | ಫಲಿತಾಂಶ |
|---|---|---|---|---|---|---|---|---|---|---|---|---|
| | | | | | ಯೋಜನೆ 1 | ಮೊತ್ತ | ಯೋಜನೆ 2 | ಮೊತ್ತ | ಯೋಜನೆ 3 | ಮೊತ್ತ | | |
| ಅನುಷ್ಠಾನಗೊಳಿಸಲು ಅಂತಿಮಗೊಳಿಸಿದ ಪಟ್ಟಿ | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| ಅನುಷ್ಠಾನಗೊಳಿಸದೆ ಬಾಕಿ ಉಳಿದಿರುವ ಪಟ್ಟಿ (**Pending list**) | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

## ಭಾಗ –ಡಿ ಜಿಲ್ಲಾ ಪಂಚಾಯತ್ ಗುರುತಿಸಿ, ಸಂಬಂಧಿತ ಇಲಾಖೆಗಳು ಕೈಗೊಳ್ಳಬಹುದಾದ ಕಾಮಗಾರಿಗಳ ವಿವರ

ಜಿಲ್ಲೆಯ ಹೆಸರು : ತಾಲ್ಲೂಕಿನ ಹೆಸರು :

ಗ್ರಾಮ ಪಂಚಾಯಿತಿಯ ಹೆಸರು : ಇಲಾಖೆಯ ಹೆಸರು:

| ಕ್ರ.ಸಂ | ವಲಯ/ಕ್ಷೇತ್ರ | ಕಾಮಗಾರಿಗಳು | ಒಟ್ಟು ಮೊತ್ತ | ಜಿಲ್ಲಾ ಪಂಚಾಯಿತಿಯ ಹೆಸರು | ಅವಶ್ಯಕ ಹಣಕಾಸನ್ನು ಒದಗಿಸುವ ಯೋಜನೆಗಳ ಹೆಸರು | | | | | | ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ | ಫಲಿತಾಂಶ |
|---|---|---|---|---|---|---|---|---|---|---|---|---|
| | | | | | ಯೋಜನೆ 1 | ಮೊತ್ತ | ಯೋಜನೆ 2 | ಮೊತ್ತ | ಯೋಜನೆ 3 | ಮೊತ್ತ | | |
| ಅನುಷ್ಠಾನಗೊಳಿಸಲು ಅಂತಿಮಗೊಳಿಸಿದ ಪಟ್ಟಿ | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| ಅನುಷ್ಠಾನಗೊಳಿಸದೆ ಬಾಕಿ ಉಳಿದಿರುವ ಪಟ್ಟಿ (**Pending list**) | | | | | | | | | | | | |
| ವೈಯಕ್ತಿಕ ಫಲಾನುಭವಿ | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| **ಸಮುದಾಯದ ಅಭಿವೃದ್ಧಿ ಚಟುವಟಿಕೆಗಳು** | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

### 2.2.15 : ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯನ್ನು ಅಂತಿಮಗೊಳಿಸುವುದು

ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯು 6 ಭಾಗಗಳನ್ನು ಹೊಂದಿರುತ್ತದೆ. ಅವುಗಳು ಕೆಳಗಿನಂತಿವೆ.

ಭಾಗ 1: ಗ್ರಾಮವಾರು ಭೌಗೋಳಿಕ ಜನಸಾಂದ್ರತೆ, ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಜೀವನೋಪಾಯ ವಿವರ.

ಕಛೇರಿ ಸಿಬ್ಬಂದಿಗಳು, ಸಿಬ್ಬಂದಿಗಳ ಮಾದರಿ ಹಾಗೂ ವಿವಿಧ ಸ್ಥಾಯಿ ಸಮಿತಿಗಳ ಮೇಲೆ ಗ್ರಾಮ ಪಂಚಾಯತಿಯ ಕೇಂದ್ರೀಕರಣದ ಚಿತ್ರಣ

ಭಾಗ 2: ಅಭಿವೃದ್ಧಿಯ ಪ್ರಸ್ತುತ ಸ್ಥಿತಿಗತಿಗಳ ವಿಶ್ಲೇಷಣೆ, ಗ್ರಾಮಗಳಲ್ಲಿನ ಸಮಸ್ಯೆಗಳ ಗುರುತಿಸುವಿಕೆ ಹಾಗೂ ಅವುಗಳನ್ನು ನಿವಾರಿಸಲು ಇರುವ ಪರಿಹಾರಗಳು.

ಭಾಗ 3: ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸಲು ಗ್ರಾಮ ಪಂಚಾಯತಿಯ ಸಂಪನ್ಮೂಲ ಗುಚ್ಛ.

ಭಾಗ 4: ಸಮಸ್ಯೆಗಳ ವಿಶ್ಲೇಷಣೆ ಮತ್ತು ಗ್ರಾಮವಾರು ಹಾಗೂ ವಾರ್ಡ್‌ವಾರು ನಡೆಸಬೇಕಾದ ಚಟುವಟಿಕೆಗಳ ಆದ್ಯತೀಕರಣ

ಭಾಗ 5: ಗ್ರಾಮ ಪಂಚಾಯತಿ ಅಭಿವೃದ್ಧಿ ಮುನ್ನೋಟ ಯೋಜನೆ – ಕೇಂದ್ರೀಕರಿಸಬಹುದಾದ ಕೆಲಸಗಳು/ಭಾಗ–ಎ, ಭಾಗ–ಬಿ, ಭಾಗ–ಸಿ & ಭಾಗ–ಡಿ ಗಳಲ್ಲಿ ಗೊತ್ತು ಮಾಡಿದ ಗ್ರಾಮ ಪಂಚಾಯತಿ ಸಂಪನ್ಮೂಲ ಗುಚ್ಛ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ರಾಜ್ಯ ವಲಯಗಳ ಕೆಳಗೆ ನಡೆಸಬೇಕಾದ ಚಟುವಟಿಕೆಗಳು.

ಭಾಗ 6: ಯೋಜನೆಗಳ ರಚನಾ ಕ್ರಮ, ಕೇಂದ್ರೀಕರಿಸಿದ ಕಾರ್ಯಕ್ರಮಗಳ ವಿವರದ ಸಾರಾಂಶ, ವೆಚ್ಚ, ಯೋಜನೆ, ಕಾಲಾನುಕ್ರಮ ಮತ್ತು ಫಲಿತಾಂಶ.

**2.2.16 ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸುವುದು.**

ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯು ಮೇಲಿನ ಯೋಜನೆಗಳನ್ನು ಅನುಮೋದಿಸಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಜಿಲ್ಲಾ ಯೋಜನಾ ಸಮಿತಿಗಳಿಗೆ ಸಲ್ಲಿಸಬೇಕು.

**ಅನುಷ್ಠಾನದ ಪ್ರಕ್ರಿಯೆ ಮತ್ತು ಯೋಜನೆಗಳ ಮೇಲ್ವಿಚಾರಣೆ**

ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಯಶಸ್ಸು ಅದರ ಪರಿಣಾಮಕಾರಿ ಅನುಷ್ಟಾನದ ಮೇಲೆ ಅವಲಂಬಿತವಾಗಿರುತ್ತದೆ. ಪ್ರತ್ಯೇಕ ಕಾಮಗಾರಿಗಳ ವಿವರಗಳು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸಂಬಂಧಿತ ಅಧಿಕಾರದಿಂದ ಪಡೆಯಬೇಕಾಗುತ್ತದೆ. ಇದಕ್ಕಾಗಿ ಬಡ್ಜೆಟ್ ಮತ್ತು ಅಕೌಂಟ್ ರೂಲ್, 2006 ಮತ್ತು ಕೆಟಿಪಿಪಿ ನಿಯಮಗಳನ್ನು ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ಪಾಲಿಸಲೇಬೇಕಾಗುತ್ತದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಲು ಕಟ್ಟುನಿಟ್ಟಾದ ಮೇಲ್ವಿಚಾರಣೆಯ ಅಗತ್ಯವಿದೆ. ಇದಕ್ಕಾಗಿ ಎಲ್ಲಾ ಹಂತಗಳಲ್ಲೂ ಅಧಿಕಾರಿಗಳ ಮೇಲ್ವಿಚಾರಣೆಯ ಅಗತ್ಯವಿದ್ದು, ಇದಕ್ಕಾಗಿ ನಮೂನೆ 6ನ್ನು ಸಿದ್ದಪಡಿಸಲಾಗಿದೆ.

## ನಮೂನೆ – 6 ಮೇಲ್ವಿಚಾರಣಾ ಪ್ರಕ್ರಿಯೆ ನಮೂನೆ ( ರಾಜ್ಯ/ಜಿಲ್ಲೆ/ಗ್ರಾಮ ಪಂಚಾಯಿತಿ ನೋಡಲ್ ಅಧಿಕಾರಿ)

| ಕ್ರ.ಸಂ | ಜಿಲ್ಲೆ/ ತಾಲ್ಲೂಕು/ ಗ್ರಾ.ಪಂ | ಜಿಲ್ಲಾ ಮಟ್ಟದ ತರಬೇತಿ | ತಾಲ್ಲೂಕು ಮಟ್ಟದ ತರಬೇತಿ | ಗ್ರಾ.ಪಂ ಮಟ್ಟದ ತರಬೇತಿ | ಸಂಪೂರ್ಣ ಅಂಕಿ ಅಂಶಗಳನ್ನು ಸಂಗ್ರಹಿಸಿರುವ ಗ್ರಾ.ಪಂಗಳ ಸಂಖ್ಯೆ | ಪಿ.ಆರ್.ಎ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ಗ್ರಾ.ಪಂಗಳ ಸಂಖ್ಯೆ. | ಪಂಚತಂತ್ರದಲ್ಲಿ ದಾಖಲಿಸಿರುವ ಗ್ರಾ.ಪಂಗಳ ಸಂಖ್ಯೆ. | ವಾರ್ಡ್ ಸಭೆಗಳನ್ನು ಮುಗಿಸಿರುವ ಗ್ರಾ.ಪಂಗಳ ಸಂಖ್ಯೆ | ಗ್ರಾಮ ಸಭೆಗಳನ್ನು ಮುಗಿಸಿರುವ ಗ್ರಾ.ಪಂಗಳ ಸಂಖ್ಯೆ | ಗ್ರಾ.ಪಂ ಅಭಿವೃದ್ದಿ ಯೋಜನೆ ಸಿದ್ದಪಡಿಸಿರುವ ಗ್ರಾ.ಪಂಗಳ ಸಂಖ್ಯೆ | ಗ್ರಾ.ಪಂ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿರುವ ಗ್ರಾ.ಪಂಗಳ ಸಂಖ್ಯೆ. | ಜಿಲ್ಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಯೋಜನಾ ಸಮಿತಿಗೆ ಗ್ರಾ.ಪಂ ಅಭಿವೃದ್ಧಿ ಯೋಜನಾ ಪ್ರತಿಯನ್ನು ತಲುಪಿಸಿರುವ ಗ್ರಾ.ಪಂಗಳ ಸಂಖ್ಯೆ. |
|---|---|---|---|---|---|---|---|---|---|---|---|---|
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

## 3. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ತಯಾರಿಯಲ್ಲಿ ವಹಿಸಬೇಕಾದ ಪಾತ್ರಗಳು ಮತ್ತು ಜವಾಬ್ದಾರಿಗಳು

ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಪ್ರಕ್ರಿಯೆಯಲ್ಲಿ ಸಮುದಾಯ ಹಾಗೂ ವಿವಿಧ ಸಹಭಾಗಿದಾರರ ಪಾತ್ರಗಳು ಹಾಗು ಜವಾಬ್ದಾರಿಗಳ ಸ್ಪಷ್ಟ ಚಿತ್ರಣದ ಅಗತ್ಯವಿದೆ. ಈ ವಿಭಾಗವು ಇಡೀ ರಾಜ್ಯದಲ್ಲಿ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸದಸ್ಯರು, ವಿವಿಧ ಸಮಿತಿಗಳು, ಅಧಿಕಾರಿಗಳು ಹಾಗೂ ಸಮುದಾಯವು ತಮ್ಮ ತಮ್ಮ ಜವಾಬ್ದಾರಿ ಮತ್ತು ಪಾತ್ರಗಳನ್ನು ನಿರ್ವಹಿಸುವ ಬಗ್ಗೆ ವಿವರಗಳನ್ನು ಒದಗಿಸುತ್ತದೆ.

### 3.1 ಅಳವಡಿಸಿಕೊಳ್ಳಬೇಕಾದ ಪ್ರಕ್ರಿಯೆಗಳು

- ರಾಜ್ಯ ಮಟ್ಟದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ.
- ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಮಿತಿಗಳ ರಚನೆ.
- ಪ್ರತಿ ಗ್ರಾಮ ಪಂಚಾಯತಿಗಳ ಸಂಪನ್ಮೂಲ ಗುಚ್ಛ ಗುರುತಿಸುವುದು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಗಳ ಸಿದ್ಧತೆಗೆ ಟೂಲ್‌ಕಿಟ್ ತಯಾರಿಸಿಕೊಳ್ಳುವುದು.
- ಸಾಮಾರ್ಥ್ಯಾಭಿವೃದ್ಧಿಗೊಳಿಸುವ ಜವಾಬ್ದಾರಿಗಳು.
- ಅಂಕಿ–ಅಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ.

### 3.2 ವಿವಿಧ ಹಂತಗಳಲ್ಲಿ ಜವಾಬ್ದಾರಿ ನಿರ್ವಹಿಸುವವರು.

- ಸಚಿವಾಲಯದಲ್ಲಿ ರಾಜ್ಯ ನೋಡಲ್ ಅಧಿಕಾರಿ.
- ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
- ಜಿಲ್ಲಾ ನೋಡಲ್ ಅಧಿಕಾರಿ – ಪ್ರತಿ ಜಿಲ್ಲೆಯಲ್ಲಿ ಮುಖ್ಯ ಯೋಜನಾಧಿಕಾರಿಗಳು ಅಥವಾ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯನ್ನಾಗಿ ನಿಯೋಜಿಸುವುದು.
- ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು.
- ಗ್ರಾಮ ಪಂಚಾಯತಿ ನೋಡಲ್ ಅಧಿಕಾರಿ (ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳು).
- ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ.
- ಸಮುದಾಯದ ಸ್ವಯಂಸೇವಕರು.
- ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ.

**3.3 ಜಿಲ್ಲಾ ಯೋಜನಾ ಸಮಿತಿ.**

- ಜಿಲ್ಲೆಯಲ್ಲಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಸಮಗ್ರ ಮೇಲ್ವಿಚಾರಣೆ.
- ವಿವಿಧ ಸಮಿತಿಗಳಿಗೆ ಯೋಜನೆಗಳನ್ನು ಸಿದ್ಧಪಡಿಸಲು ಮಾರ್ಗದರ್ಶನ.
- ಯೋಜನೆಗಳಲ್ಲಿನ ತಂತ್ರಗಳನ್ನು ಖಾತ್ರಿಪಡಿಸುವುದು.
- ವಿವಿಧ ಸಮಿತಿಗಳ ಚಟುವಟಿಕೆಗಳ ಕೇಂದ್ರೀಕರಣವನ್ನು ಖಾತ್ರಿಪಡಿಸುವುದು.

**3.4 ಜಿಲ್ಲಾ ಕೋರ್ ಕಮಿಟಿ.**

- ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಕೋರ್ ಕಮಿಟಿಯ ಮುಖ್ಯಸ್ಥರಾಗಿರುತ್ತಾರೆ
- ಸಂಬಂಧಿತ ಇಲಾಖೆಗಳ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಕಮಿಟಿಯಲ್ಲಿರುತ್ತಾರೆ
- ಮುಖ್ಯ ಯೋಜನಾಧಿಕಾರಿ ಅಥವಾ ಉಪ ಕಾರ್ಯದರ್ಶಿ ಸಮಿತಿಯ ನೋಡಲ್ ಅಧಿಕಾರಿಯಾಗಿರುತ್ತಾರೆ
- ಜಿಲ್ಲೆಯಲ್ಲಿನ ತಾಲ್ಲೂಕು ಪಂಚಾಯತಿಗಳ ಎಲ್ಲಾ ಕಾರ್ಯನಿರ್ವಾಹಕಾಧಿಕಾರಿಗಳು ಸಮಿತಿಯಲ್ಲಿರುತ್ತಾರೆ

**ಜಿಲ್ಲಾ ಮಟ್ಟದ ಕೋರ್ ಕಮಿಟಿಯಡಿಯಲ್ಲಿ ಕೆಳಗಿನ ಪ್ರಕ್ರಿಯೆಗಳು ನೆಡೆಯಬೇಕು**

- ಜಿಲ್ಲಾ ಪಂಚಾಯತಿ ಯೋಜನೆ ಮತ್ತು ರಾಜ್ಯ ವಲಯದ ಯೋಜನಾ ಚಟುವಟಿಕೆಗಳನ್ನು ಅಂತಿಮಗೊಳಿಸುವಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಸಹಾಯ ಮಾಡುತ್ತದೆ.
- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನಾ ಸಿದ್ಧತೆಯಲ್ಲಿ ತಾಲ್ಲೂಕು ಮಟ್ಟದ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು
- ಸಹಭಾಗಿಗಳ ಸಾಮಾರ್ಥ್ಯಾಭಿವೃದ್ಧಿಗೊಳಿಸುವ ಮೇಲ್ವಿಚಾರಣೆ
- ಜಿಲ್ಲಾ ಪಂಚಾಯತಿ, ಜಿಲ್ಲಾ ಯೋಜನಾ ಸಮಿತಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿಯಮಿತವಾಗಿ ಪ್ರಗತಿ ವರದಿ ಮಾಡುವುದು

**3.5 ತಾಲ್ಲೂಕು ಮಟ್ಟದ ಕೋರ್ ಕಮಿಟಿ**

- ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಕೋರ್ ಕಮಿಟಿಯ ಮುಖ್ಯಸ್ಥರಾಗಿರುತ್ತಾರೆ.
- ಸಂಬಂಧಿತ ಇಲಾಖೆಗಳ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಕಮಿಟಿಯಲ್ಲಿರುತ್ತಾರೆ. ಹಾಗೂ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ವಿಕೇಂದ್ರೀಕೃತ ತರಬೇತಿ ಸಂಯೋಜಕರುಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.
- ತಾಲ್ಲೂಕು ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಮಿತಿಯಲ್ಲಿರುತ್ತಾರೆ.

**ತಾಲ್ಲೂಕು ಮಟ್ಟದ ಕೋರ್ ಕಮಿಟಿಯಡಿಯಲ್ಲಿ ಕೆಳಗಿನ ಪ್ರಕ್ರಿಯೆಗಳು ನಡೆಯಬೇಕು**

- ತಾಲ್ಲೂಕು ಪಂಚಾಯತಿ ಯೋಜನೆಗಳು ಮತ್ತು ರಾಜ್ಯ ವಲಯದ ಯೋಜನಾ ಚಟುವಟಿಕೆಗಳನ್ನು ಅಂತಿಮಗೊಳಿಸುವಲ್ಲಿ ಗ್ರಾಮ ಪಂಚಾಯತಿಗಳಿಗೆ ಸಹಾಯ ಮಾಡುವುದು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನಾ ಸಿದ್ಧತೆಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸುವುದು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನಾ ಸಿದ್ಧತೆಯಲ್ಲಿನ ಚಟುವಟಿಕೆ ಮತ್ತು ಪ್ರಕ್ರಿಯೆಗಳ ಮೇಲ್ವಿಚಾರಣೆ ಮಾಡುವುದು
- ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಜಿಲ್ಲಾ ಮಟ್ಟದ ಕೋರ್ ಕಮಿಟಿಗೆ ನಿಯಮಿತವಾಗಿ ಪ್ರಗತಿ ವರದಿ ಮಾಡುವುದು.

**3.6 ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿ**

- ಗ್ರಾಮ ಪಂಚಾಯತಿ ಅಧ್ಯಕ್ಷರು ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿಯ ಮುಖ್ಯಸ್ಥರಾಗಿರುತ್ತಾರೆ.
- ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಮಿಟಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

- ಈ ಕಮಿಟಿಯಲ್ಲಿ ಚುನಾಯಿತ ಪ್ರತಿನಿಧಿಗಳು, ಗ್ರಾಮ ಮಟ್ಟದ ಶಿಕ್ಷಣ ಇಲಾಖೆ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೃಷಿ ಮುಂತಾದ ಇಲಾಖೆಗಳ ಪ್ರತಿನಿಧಿಗಳು ಇತರೆ ಸದಸ್ಯರುಗಳಾಗಿರುತ್ತಾರೆ.

**ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿಯು ಯೋಜನೆ ತಯಾರಿಯಲ್ಲಿ ಈ ಕೆಳಗಿನ ಪ್ರಕ್ರಿಯೆಗಳನ್ನು ಕೈಗೊಳ್ಳುತ್ತದೆ.**

- ಅಭಿವೃದ್ಧಿ ವಿಷಯಗಳಿಗೆ ಪೂರಕವಾದ ಅಥವಾ ಸಂಬಂಧಿಸಿದ ಸಮಸ್ಯೆಗಳು ಹಾಗೂ ಅಂತರಗಳನ್ನು ಕುರಿತು ಚರ್ಚಿಸುವುದು.
- ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸುವುದು.
- ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವುದು.
- ಗ್ರಾಮ ಪಂಚಾಯತಿಯ ಮುನ್ನೋಟ ದಾಖಲೆಯನ್ನು ಸಿದ್ಧಪಡಿಸುವುದು.
- ಗ್ರಾಮಗಳಲ್ಲಿ ಮಾಹಿತಿ/ಅಂಕಿ–ಅಂಶಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ಕ್ರೋಢೀಕರಿಸುವುದು.
- ಗ್ರಾಮಗಳಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಬೇಡಿಕೆ ಹಾಗೂ ಆದ್ಯತಾ ಪಟ್ಟಿಯನ್ನು ಕ್ರೋಢಿಕರಿಸುವುದು.
- ಮಾನವ ಅಭಿವೃದ್ಧಿ, ಸಂರಕ್ಷಣೆ ಮತ್ತು ಕೌಶಲ್ಯಭರಿತ/ ವಿವೇಚಾನಾಯುಕ್ತ ಪೂರಕ ವಿಷಯಗಳಿಗೆ ಉಪಯುಕ್ತವಾಗುವ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಗಮನಹರಿಸುವುದು.
- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಡಾಕ್ಯುಮೆಂಟ್ ಸಿದ್ಧಪಡಿಸಲು ತಜ್ಞರನ್ನು ಸಂಪರ್ಕಿಸುವುದು.
- ಯೋಜನಾ ಡಾಕ್ಯುಮೆಂಟನ್ನು ಅನುಮೋದಿಸುವುದು ಮತ್ತು ತಾಲ್ಲೂಕು ಕೋರ್ ಕಮಿಟಿ ಹಾಗೂ ಜಿಲ್ಲಾ ಯೋಜನಾ ಸಮಿತಿಗೆ ಕಳುಹಿಸುವುದು.

**3.7 ಜಾಗೃತಿ ಕಾರ್ಯಕ್ರಮಗಳು**

- ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಮತ್ತು ನೋಡಲ್ ಅಧಿಕಾರಿ.
- ಜಿಲ್ಲಾ ಯೋಜನಾ ಸಮಿತಿ ಸದಸ್ಯರು.

- ಜಿಲ್ಲಾ ಮಟ್ಟದ ಕೋರ್ ಕಮಿಟಿ ಸದಸ್ಯರು.
- ತಾಲ್ಲೂಕು ಮಟ್ಟದ ಕೋರ್ ಕಮಿಟಿ ಸದಸ್ಯರು.
- ಗ್ರಾಮ ಪಂಚಾಯತಿ ಮಟ್ಟದ ಕೋರ್ ಕಮಿಟಿ ಸದಸ್ಯರು.
- ಸಾಮರ್ಥ್ಯಾಭಿವೃದ್ಧಿ ಸಮುದಾಯ ಸ್ವಯಂಸೇವಕರು ಮತ್ತು ಸ್ವ-ಸಹಾಯ ಸಂಘದ ಸದಸ್ಯರು.

**3.8 ಗ್ರಾಮ ಪಂಚಾಯತಿ ಯೋಜನಾ ಪ್ರಕ್ರಿಯೆ**

- ಗ್ರಾಮ ಪಂಚಾಯಿತಿಯು 5 ಜನ ಸಮದಾಯ ಸ್ವಯಂ ಸೇವಕರನ್ನು ಗುರುತಿಸುವುದು – ಸಮುದಾಯ ಸ್ವಯಂ ಸೇವಕರನ್ನಾಗಿ ಗ್ರಾಮದೊಳಗಿನ ನಿವೃತ್ತ ಅಧಿಕಾರಿಗಳು, ಸ್ವ-ಸಹಾಯ ಸಂಘ/ಯುವಕ ಸಂಘ/ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಇದರ ಜೊತೆಗೆ ಗ್ರಾಮಗಳ ಬಗ್ಗೆ ಉತ್ತಮ ತಿಳುವಳಿಕೆ ಮತ್ತು ಸಾಮಾಜಿಕ ವಿಷಯಗಳ ಕಳಕಳಿಯಿರುವುದನ್ನು ಪರಿಗಣಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಪಿ.ಯು.ಸಿ ಓದಿದ್ದು ಕಂಪ್ಯೂಟರ್ ಜ್ಞಾನ ಹೊಂದಿರುವಂತವರನ್ನು ಸಮುದಾಯ ಸ್ವಯಂ-ಸೇವಕರನ್ನಾಗಿ ತೆಗೆದುಕೊಳ್ಳಲು ಪರಿಗಣಿಸಬಹುದು. ಈ ಅರ್ಹತೆಯನ್ನು ಹೊಂದಿರುವಂತಹ ವಿಕೇಂದ್ರಿಕೃತ ತರಬೇತಿ ಸಂಯೋಜಕರುಗಳು ಅಥವಾ ಭಾರತ್ ನಿರ್ಮಾಣ್ ಸ್ವಯಂ-ಸೇವಕರುಗಳನ್ನು ಕೂಡಾ ಆಯ್ಕೆ ಮಾಡಿಕೊಳ್ಳಬಹುದು.
- ಸಮುದಾಯ ಸ್ವಯಂ ಸೇವಕರು ವಾರ್ಡ್ ಮಟ್ಟದಲ್ಲಿ ಅಂಕಿ-ಅಂಶಗಳನ್ನು ಸಂಗ್ರಹಿಸುವುದು, ಪಿಆರ್ಎ ಚುಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಮತ್ತು ಅಂಕಿ-ಅಂಶಗಳನ್ನು ದಾಖಲೀಕರಣ ಮಾಡಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಸಹಕರಿಸುವುದು. ಇವರುಗಳಿಗೆ ಈ ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಪ್ರತಿಯೊಬ್ಬರಿಗೂ/ಎಲ್ಲಾರಿಂದ ಒಟ್ಟು ರೂ. 5,000/-ಗಳನ್ನು ಗೌರವ ಧನವನ್ನಾಗಿ ನೀಡಬಹುದಾಗಿರುತ್ತದೆ.
- ಗ್ರಾಮ ಪಂಚಾಯಿತಿಯು ಸಮುದಾಯ ಸ್ವಯಂ ಸೇವಕರುಗಳ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವುದು.
- ಪಾಥಮಿಕ ಮತ್ತು ದ್ವಿತೀಯ ಮೂಲದ ಅಂಕಿ ಅಂಶಗಳನ್ನು ಸಂಗ್ರಹಿಸುವುದು.
- ಗ್ರಾಮ ಪಂಚಾಯಿತಿಯಿಂದ ಗ್ರಾಮವಾರು ಅಂಕಿ ಅಂಶಗಳನ್ನು ಕ್ರೋಢೀಕರಿಸುವುದು.

- ಗ್ರಾಮಗಳಲ್ಲಿ ಪಿ.ಆರ್.ಎ. ಮಾಡುವ ಮೂಲಕ ಗ್ರಾಮಗಳಲ್ಲಿನ ಅಂತರಗಳು ಮತ್ತು ಸಮಸ್ಯೆಗಳನ್ನು ಗುರುತಿಸುವುದು.
- ವಾರ್ಡ್ ಸಭೆಯನ್ನು ಆಯೋಜಿಸುವುದು – ಇಲ್ಲಿ ಅಗತ್ಯತೆಗಳನ್ನು ಗುರುತಿಸಿ ಅಂತರಗಳನ್ನು ಕಡಿಮೆಗೊಳಿಸಲು ಮತ್ತು ಬೇಡಿಕೆ ಪಟ್ಟಿಗೆ ಸಲಹೆ ನೀಡುವುದು.
- ಗ್ರಾಮ ಸಭೆಯ ಆಯೋಜನೆ – ವಾರ್ಡ್‌ಸಭೆಯಿಂದ ಬಂದ ಬೇಡಿಕೆಗಳ ಆದ್ಯತೆಯನ್ನು ಗುರುತಿಸುವುದು.
- ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆ – ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಅನುಮೋದನೆ ನೀಡುವುದು.
- ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಮಟ್ಟದಲ್ಲಿ ನಿರ್ವಹಿಸಬೇಕಾದ ಕಾರ್ಯಕ್ರಮಗಳನ್ನು ಕ್ರೋಢಿಕರಿಸಿ ಸಂಬಂಧಪಟ್ಟವರಿಗೆ ಸಲ್ಲಿಸುವುದು.

## 3.9 ಸಹಭಾಗಿಗಳ ಕಾರ್ಯಗಳು ಮತ್ತು ಜವಾಬ್ದಾರಿಗಳು

### ಎ. ಸಮುದಾಯ ಸ್ವಯಂ ಸೇವಕರು

- ಸಂಬಂಧಿತ ಇಲಾಖೆಗಳಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಪ್ರಾಥಮಿಕ ಮತ್ತು ದ್ವಿತೀಯ ಮೂಲದ ಮಾಹಿತಿ ಸಂಗ್ರಹಣೆಯಲ್ಲಿ ಸಹಾಯ ಮಾಡುವುದು.
- ವಿಶೇಷವಾಗಿ ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಆರೋಗ್ಯ ಉಪಕೇಂದ್ರಗಳಲ್ಲಿನ ಮೂಲ ಸೌಕರ್ಯಗಳನ್ನು ಪರಿಶೀಲಿಸುವುದು.
- ಸಹಭಾಗಿಗಳ ಜೊತೆ ಗ್ರಾಮಗಳಲ್ಲಿ ಗುಂಪು ಚರ್ಚೆಗಳನ್ನು ಮಾಡುವ ಮೂಲಕ ಸಮಸ್ಯೆಗಳನ್ನು ಗುರುತಿಸುವುದು.
- ಗ್ರಾಮಗಳಲ್ಲಿ ಪಿ.ಆರ್.ಎ. ಪ್ರಕ್ರಿಯೆಯನ್ನು ಆಯೋಜಿಸುವುದು.
- ನಿಗಧಿತ ನಮೂನೆಯಲ್ಲಿ ಅಂಕಿಅಂಶಗಳನ್ನು ದಾಖಲಿಸುವುದು.

### ಬಿ. ಪಂಚಾಯತಿ ಅಭಿವೃದ್ಧಿ ಅಧಿಕಾರಿ

- ಸಮುದಾಯ ಸ್ವಯಂಸೇವಕರುಗಳಿಗೆ ಚಟುವಟಿಕೆಗಳನ್ನು ಗ್ರಾಮ ಪಂಚಾಯತಿ ನಮೂನೆಯಲ್ಲಿ ದಾಖಲಿಸಲು ಮಾರ್ಗದರ್ಶನ ನೀಡುವುದು ಮತ್ತು ಅದರ ಮೇಲ್ವಿಚಾರಣೆ ಮಾಡುವುದು.

- ಸಮುದಾಯ ಸ್ವಯಂಸೇವಕರು ಮತ್ತು ಇತರೆ ಇಲಾಖೆಗಳ ಅಧಿಕಾರಿಗಳು ಸಂಗ್ರಹಿಸಿದ ಅಂಕಿಅಂಶಗಳನ್ನು ಪರಿಶೀಲಿಸುವುದು.
- ಗ್ರಾಮವಾರು ಅಂಕಿ–ಅಂಶಗಳಿಂದ ಗ್ರಾಮ ಪಂಚಾಯತಿ ಅಂಕಿ–ಅಂಶಗಳನ್ನು ಕ್ರೋಢಿಕರಿಸುವುದು.
- ಅಭಿವೃದ್ಧಿಯಲ್ಲಿನ ಸಮಸ್ಯೆಗಳ ಮತ್ತು ಅಂತರಗಳನ್ನು ಗುರುತಿಸುವುದು.
- ಚುನಾಯಿತ ಪ್ರತಿನಿಧಿಗಳ ಜೊತೆ ಸಮಸ್ಯೆಗಳ ಮತ್ತು ಅಂತರಗಳ ಬಗ್ಗೆ ಚರ್ಚಿಸುವುದು.
- ವಾರ್ಡ್‌ಸಭೆ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವುದು, ಸಮುದಾಯದ ಅವಶ್ಯಕತೆಗಳನ್ನು ಗುರುತಿಸುವುದು ಮತ್ತು ಸಮುದಾಯದಿಂದ ಸ್ವೀಕರಿಸಿದ ಬೇಡಿಕೆ ಪಟ್ಟಿಯನ್ನು ಕ್ರೋಢಿಕರಿಸುವುದು.
- ಸಂಬಂಧಿತ ಅಧಿಕಾರಿಗಳ ಮತ್ತು ತಾಂತ್ರಿಕ ವ್ಯಕ್ತಿಗಳ ಸಹಾಯದಿಂದ ಗ್ರಾಮ ಪಂಚಾಯತಿ.
- ಯೋಜನೆಯನ್ನು ಗ್ರಾಮ ಪಂಚಾಯಿತಿಯಿಂದ ಅನುಮೋದಿಸುವುದು.

**ಸಿ. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು**

- ಪ್ರತಿ ಗ್ರಾಮ ಪಂಚಾಯಿತಿಗೂ ನೋಡಲ್ ಅಧಿಕಾರಿಗಳನ್ನು ಗುರುತಿಸುವುದು.
- ಗ್ರಾಮ ಪಂಚಾಯಿತಿಗಲ್ಲಿ ಯೋಜನೆ ಸಿದ್ಧತೆಯ ಪ್ರಗತಿಯ ಬಗ್ಗೆ ಮೇಲ್ವಿಚಾರಣೆ ಮಾಡುವುದು.
- ತಾಲ್ಲೂಕು ಕೋರ್ ಕಮಿಟಿಗೆ ಯೋಜನೆಯ ಪ್ರಗತಿಯ ವಿವರ ನೀಡುವುದು.
- ಗ್ರಾಮ ಪಂಚಾಯತಿಗಳಿಗೆ ಸಂಬಂಧಿತ ಇಲಾಖೆಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಲು ಸಹಾಯವಾಗುವಂತೆ ಭರವಸೆ ನೀಡುವುದು.

**ಡಿ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**

- ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಸಹಕಾರ ನೀಡುವಂತೆ ಖಾತರಿ ಪಡಿಸುವುದು.
- ಜಿಲ್ಲಾ ಯೋಜನಾ ಸಮಿತಿ ಮತ್ತು ಜಿಲ್ಲಾ ಕೋರ್ ಕಮಿಟಿಗಳ ಸಭೆಗಳನ್ನು ನಿಯಮಿತವಾಗಿ ಆಯೋಜಿಸುವುದು.

- ಗ್ರಾಮ ಪಂಚಾಯತಿ ಯೋಜನೆ ತಯಾರಿಯ ಪ್ರಗತಿ ಕುರಿತು ಆರ್.ಡಿ.ಪಿ.ಆರ್.ಗೆ ವರದಿ ಮಾಡುವುದು.
- ಗ್ರಾಮ ಪಂಚಾಯತಿ ನೋಡಲ್ ಅಧಿಕಾರಿಗಳ ಯೋಜನಾ ಚಟುವಟಿಕೆಗಳ ಮೇಲ್ವಿಚಾರಣೆ
- ಎಲ್ಲಾ ಭಾಗಿದಾರರ ಸಾಮರ್ಥ್ಯಾಭಿವೃದ್ದಿ ಚಟುವಟಿಕೆಗಳ ಬಗ್ಗೆ ಭರವಸೆ ನೀಡುವುದು

**ಇ. ರಾಜ್ಯ ಮಟ್ಟದ ನೋಡಲ್ ಅಧಿಕಾರಿಗಳು**

- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ತಯಾರಿ
- ಯೋಜನಾ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸುವುದು

**ಎಫ್. ಎ.ಎನ್.ಎಸ್.ಎಸ್.ಐ.ಆರ್.ಡಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಪಾತ್ರ**

- ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ ಸಿದ್ಧಪಡಿಸಲು ಟೂಲ್‌ಕಿಟ್ ತಯಾರಿಸುವುದು.
- ಗ್ರಾಮ ಪಂಚಾಯತಿ ದತ್ತಾಂಶಗಳ ನಮೂನೆಗಳನ್ನು ಅಂತಿಮಗೊಳಿಸುವುದು.
- ಸಹಭಾಗಿಗಳಿಗೆ ಸಾಮರ್ಥ್ಯಾಭಿವೃದ್ಧಿಗೊಳಿಸಲು ಅರಿವು ಮೂಡಿಸುವುದು.

# ಅನುಬಂಧ – 1

## ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳು:

ಗ್ರಾಮೀಣಾಭಿವೃದ್ಧಿಗೆ ಹಲವು ಯೋಜನೆಗಳನ್ನು ಸರ್ಕಾರಗಳು ಜಾರಿಮಾಡಿದ್ದರು ಸಹ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕೆಲವೊಂದು ನಿರ್ದಿಷ್ಟವಾದ ಉದ್ದೇಶಗಳನ್ನು ಈಡೇರಿಸಲು ಜಾರಿಮಾಡಲಾಗಿದೆ. ಈ ಉದ್ದೇಶಗಳು ಬಹಳ ಪ್ರಮುಖವಾಗಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಪೂರಕವಾಗಿ ಹಾಗೂ ಕೃಷಿ ಮತ್ತು ತತ್ಸಂಬಂಧಿತ ಚಟುವಟಿಕೆಗಳಿಗೆ ಹೆಚ್ಚು ಒತ್ತನ್ನು ಕೊಟ್ಟಿದೆ. ಈ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದರ ಮೂಲಕ ಜನರ ಜೀವನೋಪಾಯ ಮೂಲಗಳನ್ನು ಬಲಪಡಿಸುವುದಾಗಿದೆ. ಕೇಂದ್ರ ಸರ್ಕಾರವು 03ನೇ ಜನವರಿ, 2014 ರಂದು ಅನುಸೂಚಿ–1ಕ್ಕೆ ತಿದ್ದುಪಡಿಯನ್ನು ಮಾಡುವುದರ ಮೂಲಕ ಅನುಷ್ಠಾನ ಮಾಡಬಹುದಾದ ಕಾಮಗಾರಿಗಳನ್ನು ಈ ಕೆಳಗಿನ ನಾಲ್ಕು ಪ್ರವರ್ಗಗಳಾಗಿ ವಿಂಗಡಿಸಿದೆ, ಅವುಗಳೆಂದರೆ:

**ಪ್ರವರ್ಗ–ಎ: ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದ ಲೋಕೋಪಯೋಗಿ ಕಾಮಗಾರಿಗಳು.**

i) **ಜಲ ಸಂರಕ್ಷಣೆ ಹಾಗೂ ನೀರು ಕೊಯ್ಲು ವಿನ್ಯಾಸದ ಕಾಮಗಾರಿಗಳು ಕುಡಿಯುವ ನೀರಿನ ಮೂಲಗಳನ್ನು ಬಲಪಡಿಸುವುದು** ಸೇರಿದಂತೆ ಅಂತರ್‌ಜಲದ ಮರುಪೂರಣ ಕಾಮಗಾರಿಗಳಿಗೆ ವಿಶೇಷ ಒತ್ತು ನೀಡುವ ತಡೆಗಟ್ಟುಗಳು, ಮಣ್ಣಿನ ಅಣೆಕಟ್ಟೆಗಳು, ನಿಲುಗಡೆ ಕಟ್ಟುಗಳು, ತಳಹದಿಯ ತಡೆಗಳು (underground dykes), ಇವುಗಳಿಂದ ಅಂತರ್‌ಜಲ ಮಟ್ಟವನ್ನು ಸುಧಾರಣೆ ಮಾಡುವುದು ಹಾಗೂ ಹೆಚ್ಚಿಸುವುದು.

ii) **ಜಲಾನಯನ ನಿರ್ವಹಣೆ** ಸಮಪಾತಳಿ ಕಂದಕಗಳು ಟೆರೆಸಿಂಗ್ (<u>terracing</u>), ಸಮಪಾತಳಿ ಬದುಗಳ ರಚನೆ ಕಲ್ಲುಗಳ ತಡೆ (<u>Boulder checks</u>) ಹೊದರು ಕಡ್ಡಿಯ ರಚನೆ (<u>gabion structures</u>) ಮತ್ತು <u>spring shed</u> ಅಭಿವೃದ್ಧಿಯಂತಹ ಈ ಕಾಮಗಾರಿಗಳ ಪರಿಣಾಮದಿಂದಾಗಿ ಜಲಾನಯನ ಪ್ರದೇಶಕ್ಕೆ ಪರಿಪೂರ್ಣತೆಯ ಚಿಕಿತ್ಸೆ.

iii) **ಅತಿ ಸೂಕ್ಷ್ಮ ಮತ್ತು ಸಣ್ಣ ನೀರಾವರಿ ಕಾಮಗಾರಿಗಳು** ಮತ್ತು ಸೃಷ್ಟಿ, ಜೀರ್ಣೋದ್ಧಾರ ಮತ್ತು ಸಣ್ಣ ನೀರಾವರಿ ನಾಲೆಗಳ ಮತ್ತು ಚರಂಡಿಗಳ ನಿರ್ಮಾಣ.

iv) **ಸಾಂಪ್ರದಾಯಿಕ ಜಲಸಂಚಯಗಳ** ಪುನಶ್ಚೇತನಗೊಳಿಸುವ ಕಾಮಗಾರಿಗಳು, ಕೆರೆಗಳ ಹೂಳೆತ್ತುವುದು ಸೇರಿದಂತೆ ಹಾಗೂ ಇತರೆ ನೀರಿನ ಸಂಚಯ ಕಾಮಗಾರಿಗಳು.

v) **ಅರಣ್ಯೀಕರಣ,** ನೆಡುತೋಪುಗಳು, ಅರಣ್ಯ ಜಮೀನಿನಲ್ಲಿ ಮತ್ತು ಸಾಮಾನ್ಯ ಜಮೀನುಗಳಲ್ಲಿ ಗಿಡಗಳ ನೆಡುವಿಕೆ ಮತ್ತು ತೋಟಗಾರಿಕೆ, ರಸ್ತೆ ಅಂಚುಗಳು, ನಾಲೆಗಳ ಬದುಗಳು, ಕೆರೆ ಅಂಗಳಗಳು ಮತ್ತು ಕರಾವಳಿ ಪ್ರದೇಶಗಳು ಮತ್ತು ಕಂಡಿಕೆ(5)ರಲ್ಲಿ ಇರುವ ಅರ್ಹ ಪ್ರವರ್ಗಗಳ ಫಲಾನುಭವಿಗಳ ಕುಟುಂಬಗಳಿಗೆ ಹಕ್ಕು ಆಧಾರಿತ ಸೌಲಭ್ಯಗಳನ್ನು ನೀಡುವಿಕೆ ಮತ್ತು

vi) ಸಾಮಾನ್ಯ/ಸಾರ್ವಜನಿಕರ ಜಮೀನುಗಳಲ್ಲಿ ಭೂ ಅಭಿವೃದ್ಧಿ ಕಾಮಗಾರಿಗಳು

**ಪ್ರವರ್ಗ–ಬಿ: ದುರ್ಬಲ ವರ್ಗದವರಿಗೆ ವೈಯಕ್ತಿಕ ಮತ್ತು ಸಮುದಾಯ ಆಸ್ತಿಗಳ ನಿರ್ಮಾಣ**

ನಿರ್ದಿಷ್ಟವಾಗಿ ಸೂಚಿಸಲಾದ ಕುಟುಂಬಗಳ **ಜಮೀನುಗಳ ಉತ್ಪಾದಕತೆಯನ್ನು ಸುಧಾರಿಸುವ** ಸಲುವಾಗಿ ಅಗೆದ ಬಾವಿಗಳು (Dug wells), ಕೃಷಿ ಹೊಂಡಗಳು ಮತ್ತು ಇತರೆ ನೀರುಕೊಯ್ಲು ವಿನ್ಯಾಸದ ಕಾಮಗಾರಿಗಳು ಸೇರಿದಂತೆ ನೀರಾವರಿಗಾಗಿ ಸೂಕ್ತವಾದ ಮೂಲಭೂತ ಸೌಲಭ್ಯಗಳನ್ನು ಭೂ ಅಭಿವೃದ್ಧಿ ಮೂಲಕ ಒದಗಿಸುವುದು.

i) ಕೃಷಿ, ಅರಣ್ಯದ ಕಾಮಗಾರಿಗಳು, ನೆಡುತೋಪು, ರೇಷ್ಮೆ ಮತ್ತು ತೋಟಗಾರಿಕೆ ಈ ಇಲಾಖೆಗಳ ಕಾಮಗಾರಿಗಳ ಮೂಲಕ **ಜೀವನೋಪಾಯವನ್ನು ಸುಧಾರಣೆ ಮಾಡುವುದು**.

ii) ನಿರ್ದಿಷ್ಟವಾಗಿ ಸೂಚಿಸಲಾದ ಕುಟುಂಬಗಳ **ಬಂಜರು ಭೂಮಿಗಳಲ್ಲಿ ಅಥವಾ ಯೋಗ್ಯವಲ್ಲದ ಜಮೀನುಗಳನ್ನು** ಕೃಷಿಗೆ ಯೋಗ್ಯವಾಗುವಂತೆ ಮಾಡಲು ಕ್ರಮ ವಹಿಸುವುದು.

iii) ಇಂದಿರಾ ಆವಾಜ್ ಯೋಜನೆ ಅಥವಾ ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಇತರೆ ಯೋಜನೆಗಳಡಿ ಮಂಜೂರಾದ **ಮನೆಗಳ ನಿರ್ಮಾಣದಲ್ಲಿ** ಅಕುಶಲ ಕೂಲಿ ಘಟಕದ ವೆಚ್ಚವನ್ನು ಭರಿಸಲು ಕ್ರಮ ವಹಿಸುವುದು.

iv) **ಜಾನುವಾರು/ಪಶು ಸಂಪತ್ತು ಕಾರ್ಯಕ್ರಮಗಳನ್ನು ಉತ್ತೇಜಿಸುವುದಕ್ಕಾಗಿ** ಕೋಳಿಗಳಿಗೆ ಫಾರಂ, ಮೇಕೆಗಳಿಗೆ ದೊಡ್ಡಿ, ದನಗಳ ಕೊಟ್ಟಿಗೆ ಮತ್ತು ಮೇವುಗಳ ತೊಟ್ಟಿಗಳಂತಹ ಮೂಲಭೂತ ಸೌಲಭ್ಯಗಳಿಗೆ ನಿರ್ಮಾಣವನ್ನು ಕಲ್ಪಿಸುವುದು.

v) **ಮೀನುಗಾರಿಕೆಯನ್ನು ಉತ್ತೇಜಿಸಲು** ಮೂಲಭೂತ ಸೌಲಭ್ಯಗಳಾದ ಮೀನು ಒಣಗಿಸುವ ಕಣ, ಶೇಖರಣೆ ಸೌಲಭ್ಯಗಳು ಮತ್ತು ಸಾರ್ವಜನಿಕ ಜಮೀನುಗಳಲ್ಲಿ ಆಯಾ ಋತುಮಾನ ಕಾಲದಲ್ಲಿ ನೀರಿನ ಸಂಚಯಗಳಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು.

ಈ ಕೆಳಕಂಡ ಪ್ರವರ್ಗಗಳಿಗೆ ಸೇರಿದ ದುರ್ಬಲ ವರ್ಗದವರನ್ನು ನಿರ್ದಿಷ್ಟವಾಗಿ ಸೂಚಿಸಲಾದ ಕುಟುಂಬಗಳು ವೈಯಕ್ತಿಕವಾಗಿ ಮತ್ತು ಸಮುದಾಯಿಕವಾಗಿ ಪ್ರಯೋಜನಗಳನ್ನು ಅನುಕ್ರಮವಾರು ಗ್ರಾಮಸಭೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳು ಪಡೆದುಕೊಳ್ಳಲು ಅರ್ಹರಿರುತ್ತಾರೆ. ಇಂತಹ ಕುಟುಂಬಗಳ/ಫಲಾನುಭವಿಗಳ ಜಮೀನುಗಳಲ್ಲಿ ಅಥವಾ ತೋಟದಲ್ಲಿ ವ್ಯಯುಕ್ತಿಕ ಆಸ್ತಿಗಳನ್ನು ಸೃಜಿಸುವ ಕಾಮಗಾರಿಗಳನ್ನು ಆದ್ಯತಾವಾರು ಶ್ರೇಣಿ ಮಾಡತಕ್ಕದ್ದು. ಅವರುಗಳೆಂದರೆ:

a) ಪರಿಶಿಷ್ಟ ಜಾತಿ

b) ಪರಿಶಿಷ್ಟ ಪಂಗಡ,

c) ಅಲೆಮಾರಿ ಜನಗಳು

d) ಪ್ರಕಟಣೆಯಿಂದ ತೆಗೆದುಹಾಕಿದ ಬುಡಕಟ್ಟು ಜನಾಂಗದವರು

e) ಬಡತನರೇಖೆ ಕೆಳಮಟ್ಟದಲ್ಲಿ ಇರುವ ಇತರೆ ಕುಟುಂಬಗಳು

f) ಸ್ತ್ರೀ ಪ್ರಧಾನ ಕುಟುಂಬಗಳು

g) ವಿಕಲಚೇತನ ಪ್ರಧಾನ ಕುಟುಂಬಗಳು

h) ಭೂಸುದಾರಣಾ ಫಲಾನುಭವಿಗಳು

i) ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳು

j) ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯಮಾಡುವ ಅಧಿನಿಯಮ 2006 (2007 ರ 2) ಮತ್ತು

ಮೇಲಿನ ಪ್ರವರ್ಗಗಳಡಿ ಅರ್ಹ ಫಲಾನುಭವಿಗಳು ಪೂರ್ಣವಾದ ನಂತರ **ಕೃಷಿ ಸಾಲ ಮನ್ನ ಮತ್ತು ಸಾಲ ಪರಿಹಾರ ಯೋಜನೆ 2008ರಲ್ಲಿ** ವಿವರಿಸಿದಂತೆ ಹಾಗೂ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಕನಿಷ್ಠ ಒಬ್ಬ ಸದಸ್ಯರು ತಮ್ಮ ಜಮೀನಿನಲ್ಲಿ ಅಥವಾ ತೋಟದಲ್ಲಿ ಕೈಗೊಳ್ಳುವ ಕಾಮಗಾರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ ಷರತ್ತಿಗೆ ಒಳಪಟ್ಟಿರುವ **ಸಣ್ಣ ಮತ್ತು ಅತಿಸಣ್ಣ ರೈತರ** ಜಮೀನುಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬಹುದು.

**ಪ್ರವರ್ಗ–ಸಿ: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಸ್ವ–ಸಹಾಯ ಗುಂಪುಗಳು ಒಳಗೊಂಡಂತೆ ಸ್ವ ಸಹಾಯ ಗುಂಪುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.**

i) **ಕೃಷಿ ಉತ್ಪಾದಕತೆಯನ್ನು ಉತ್ತೇಜಿಸುವ ಸಲುವಾಗಿ** ಕೃಷಿ ಉತ್ಪನ್ನಗಳಿಗೆ, ಜೈವಿಕ ಗೊಬ್ಬರಗಳನ್ನು ಸಂಗ್ರಹಿಸಲು, ಬೆಳೆ ಕೊಯ್ಲು ನಂತರ ಆಹಾರ ಪದಾರ್ಥಗಳನ್ನು ಸಂಗ್ರಹಿಸಲು ದೀರ್ಘಕಾಲ ಬಾಳಿಕೆ ಬರುವ ಮೂಲಭೂತ ಸೌಲಭ್ಯಗಳಾದ ಪಕ್ಕ ಸಂಗ್ರಹಣೆ / ದಾಸ್ತಾನು ಕೊಠಡಿಗಳನ್ನು ಸೃಜಿಸುವ ಕಾಮಗಾರಿಗಳು.

ii) ಸ್ವ–ಸಹಾಯ ಗುಂಪುಗಳ ಸದಸ್ಯರ ಜೀವನೋಪಾಯದ ಗುಂಪು ಚಟುವಟಿಕೆಗಳ ಕೆಲಸಗಳಿಗಾಗಿ ಷೆಡ್‌ಗಳ ನಿರ್ಮಾಣ.

**ಪ್ರವರ್ಗ–ಡಿ: ಗ್ರಾಮೀಣ ಮೂಲಭೂತ ಸೌಲಭ್ಯಗಳು**

i) **ಗ್ರಾಮೀಣ ನೈರ್ಮಲ್ಯಕ್ಕೆ** ಸಂಬಂಧಿಸಿದ ಬಯಲು ಮಲ ವಿಸರ್ಜನೆ ಮುಕ್ತಸ್ಥಿತಿ ಸಾಧಿಸುವ ಸಲುವಾಗಿ ಇತರೆ ಸರ್ಕಾರಿ ಇಲಾಖೆಗಳ ಯೋಜನೆಯನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ/ನೇರವಾಗಿ ಅನುಷ್ಠಾನಗೊಳಿಸುವ ಮೂಲಕ, ವೈಯುಕ್ತಿಕ ಶೌಚಾಲಯ, ಶಾಲೆಗಳಲ್ಲಿ ಶೌಚಾಲಯದ ಘಟಕಗಳು, ಅಂಗನವಾಡಿ ಶೌಚಾಲಯಗಳ ನಿರ್ಮಾಣದಂತಹ ಕಾಮಗಾರಿಗಳ ಹಾಗೂ ನಿಗದಿಪಡಿಸಲಾದ ಮಾರ್ಗಸೂಚಿಗಳಂತೆ ಘನ ಮತ್ತು ದ್ರವ್ಯ ತ್ಯಾಜ್ಯಗಳ ನಿರ್ವಹಣೆ.

ii) ಸಂಪರ್ಕವಿಲ್ಲದ ಗ್ರಾಮಗಳಿಗೆ ಸರ್ವಋತು **ರಸ್ತೆಗಳ ಸಂಪರ್ಕವನ್ನು** ಒದಗಿಸುವುದು ಮತ್ತು ಗುರುತಿಸಲಾದ ಗ್ರಾಮೀಣ ಉತ್ಪನ್ನಗಳ ಕೇಂದ್ರಗಳನ್ನು ಹಾಲಿ ಇರುವ ಪಕ್ಕಾ ರಸ್ತೆಗಳಿಗೆ ಸಂಪರ್ಕವನ್ನು ಕಲ್ಪಿಸುವುದು ಮತ್ತು ಗ್ರಾಮದೊಳಗೆ ಪಕ್ಕಾ **ಅಂತರ್ ರಸ್ತೆಗಳ ನಿರ್ಮಾಣ ಅಥವಾ ಗ್ರಾಮದೊಳಗೆ ಬೀದಿಗಳನ್ನು** ಒಳಗೊಂಡಿರುವ ಬದಿ ಚರಂಡಿಗಳು ಮತ್ತು ಅಡಿಕಾಲುವೆಗಳು.

iii) **ಆಟದ ಮೈದಾನಗಳ** ನಿರ್ಮಾಣ.

iv) ರಸ್ತೆಗಳನ್ನು ಪುನರ್‌ಸ್ಥಿತಿಗೆ ತರುವುದು ಅಥವಾ **ವಿಪತ್ತು ನಿರ್ವಹಣೆಯ ಸಿದ್ದತೆಗಳನ್ನು** ಸುಧಾರಣೆ ಮಾಡುವುದಕ್ಕೆ ಕಾಮಗಾರಿಗಳು ಅಥವಾ ಪ್ರವಾಹ ನಿಯಂತ್ರಣ ಸಂರಕ್ಷಣಾ ಕಾಮಗಾರಿಗಳು, ಜವಳು ಪ್ರದೇಶದಲ್ಲಿ ಚರಂಡಿಗಳನ್ನು ನಿರ್ಮಾಣ ಮಾಡುವುದು, ಆಳಗೊಳಿಸುವುದು, ಪ್ರವಾಹ ಕಾಲುವೆಗಳನ್ನು ದುರಸ್ತಿ ಮಾಡುವುದು, ತೋಡುಗಳನ್ನು ಜೀರ್ಣೋದ್ಧಾರ ಮಾಡುವುದು, ಕರಾವಳಿ ಪ್ರದೇಶಗಳ ಸಂರಕ್ಷಣೆಗಾಗಿ ನೀರಿನ ರಭಸದ ಚರಂಡಿಗಳ ನಿರ್ಮಾಣ.

v) ತಾಲ್ಲೂಕು ಮಟ್ಟದಲ್ಲಿ ಅಥವಾ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ **ಕಟ್ಟಡಗಳ ನಿರ್ಮಾಣ**, ಮಹಿಳಾ ಸ್ವ ಸಹಾಯ ಗುಂಪುಗಳ ಸಂಯುಕ್ತ ಕೂಟಗಳು, ನೆರೆ ಹಾವಳಿಗೆ/ಪ್ರಕೃತಿ ವಿಕೋಪಕ್ಕೆ ಗುರಿಯಾದವರಿಗೆ ಆಶ್ರಯ ನೀಡುವ ಕಟ್ಟಡಗಳು, ಅಂಗನವಾಡಿ ಕೇಂದ್ರಗಳ ನಿರ್ಮಾಣ, ಗ್ರಾಮಗಳ ಗುಡಿಸಲುಗಳ ನಿರ್ಮಾಣ ಮತ್ತು ಗ್ರಾಮ ಪಂಚಾಯತಿ ಅಥವಾ ಬ್ಲಾಕ್ ಮಟ್ಟದಲ್ಲಿ ಚಿತಾಗಾರಗಳ ನಿರ್ಮಾಣ.

vi) ರಾಷ್ಟ್ರೀಯ ಆಹಾರ ಭದ್ರತಾ ಅಧಿನಿಯಮ 2013ರ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ **ಆಹಾರಧಾನ್ಯಗಳನ್ನು ಸಂಗ್ರಹಿಸುವ ಗೋದಾಮುಗಳ** ನಿರ್ಮಾಣ.

vii) ಅಧಿನಿಯಮದಡಿ ನಿರ್ಮಾಣ ಕಾಮಗಾರಿಗಳ ಅಂದಾಜುಗಳಲ್ಲಿನ ಭಾಗವಾಗಿರುವಂತೆ ಕಾಮಗಾರಿಗಳ ನಿರ್ಮಾಣಕ್ಕಾಗಿ ಬೇಕಾಗಿರುವ ಕಟ್ಟಡ ಸಾಮಗ್ರಿಗಳ ಉತ್ಪಾದನೆ.

viii) ಅಧಿನಿಯಮದಡಿ ಸೃಷ್ಟಿಸಲಾದ ಗ್ರಾಮೀಣ ಸಾರ್ವಜನಿಕರ ಆಸ್ತಿಗಳ ನಿರ್ಮಾಣದ **ನಿರ್ವಹಣೆ**.

ix) ಈ ಸಂಬಂಧ ರಾಜ್ಯಸರ್ಕಾರದ ಸಮಾಲೋಚನೆಯೊಂದಿಗೆ ಕೇಂದ್ರ ಸರ್ಕಾರವು ಪ್ರಕಟಿಸಬಹುದಾದ **ಇನ್ನಿತರೆ ಕಾಮಗಾರಿಗಳು** ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಸಂಪನ್ಮೂಲಗಳು ಮತ್ತು ಅಗತ್ಯತೆಗಳು, ಸ್ಥಳೀಯ ಪ್ರದೇಶದ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯಿತಿಯ ಗ್ರಾಮಸಭೆಗಳಲ್ಲಿ ಕಾಮಗಾರಿಗಳನ್ನು ಆದ್ಯತಾವಾರು ಶ್ರೇಣಿಯ ಮೇಲೆ ನಿರ್ಧರಿಸತಕ್ಕದ್ದು.

ಸಮರ್ಪಕವಲ್ಲದ ಕಾಮಗಾರಿಗಳು, ಅಳತೆ ಮಾಡಲಾಗದ ಕಾಮಗಾರಿಗಳು, ಪುನರಾವರ್ತನೆ ಕಾಮಗಾರಿಗಳು ಅಂದರೆ, ಕಳೆಗಳನ್ನು ತೆಗೆಯುವುದು, ಕಲ್ಲುಗಳನ್ನು ತೆಗೆಯುವುದು ಮತ್ತು ಕೃಷಿ ಚಟುವಟಿಕೆಗಳನ್ನು ತೆಗೆದುಕೊಳ್ಳುವಂತಿಲ್ಲ.

# ಅನುಬಂಧ – 2

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ '21 ಅಂಶಗಳ ಕಾರ್ಯಕ್ರಮಗಳು'

**ಹಿನ್ನಲೆ:**

ಮಾನವನ ಅವಶ್ಯಕತೆಗಳು ಮತ್ತು ಬೇಡಿಕೆಗಳು ಅಪಾರ ಆದರೆ ನಿಸರ್ಗವು ಇವುಗಳನ್ನು ಪೂರೈಸಲು ತನ್ನದೇ ಆದ ಮಿತಿಯನ್ನು ಹೊಂದಿದೆ. ಕಳೆದ ಐದು ಆರು ದಶಕಗಳಲ್ಲಿ ದೇಶದ ಜನಸಂಖ್ಯೆಯು ಮೂರರಿಂದ ನಾಲ್ಕು ಪಟ್ಟು ಹೆಚ್ಚಾಗಿದೆ. ಔದ್ಯೋಗಿಕರಣ, ಜಾಗತೀಕರಣ ಮತ್ತು ಖಾಸಗೀಕರಣದಂತಹ ಪ್ರಕ್ರಿಯೆಗಳಿಂದ ಪ್ರಸ್ತುತ ದೇಶದಲ್ಲಿ ಕೃಷಿ ಮೇಲಿನ ಅವಲಂಬನೆಯು ಕಡಿಮೆಯಾಗುತ್ತಿದೆ. ಹವಾಮಾನದ ವೈಪರೀತ್ಯಗಳಿಂದಾಗಿ ಕೃಷಿ ಚಟುವಟಿಕೆಯ ಮೇಲೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅಗಾಧ ಪರಿಣಾಮಗಳು ಬೀರಿವೆ. ಗ್ರಾಮಗಳಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ವಿವಿದ ಯೋಜನೆ ಮತ್ತು ಇಲಾಖೆಗಳ ಮೂಲಕ ಒದಗಿಸುವುದರೊಂದಿಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ವಿವಿದ ಯೋಜನೆಗಳ ಮೂಲಕ ಬಹುಬಾಳಿಕೆ ಬರುವ ಮತ್ತು ಉತ್ಪಾದನಾಶೀಲ ಆಸ್ತಿಗಳನ್ನು ಸೃಜಿಸುವುದು ಮತ್ತು ಸಮುದಾಯದ ಕೌಶಲ್ಯವನ್ನು ಉತ್ತಮಪಡಿಸುವಲ್ಲಿ ಗಮನಹರಿಸುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರವು ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳು, ನೈರ್ಮಲ್ಯ, ವೈಯಕ್ತಿಕ ಅಭಿವೃದ್ಧಿ, ಅರಣ್ಯೀಕರಣ, ಮಣ್ಣು, ನೀರು ಮತ್ತು ಕೃಷಿ ಚಟುವಟಿಕೆಗಳ ಅಭಿವೃದ್ಧಿ ಹಾಗೂ ಮಹಿಳೆಯರು ಮತ್ತು ಯುವಕರ ಕೌಶಲ್ಯಾಭಿವೃದ್ಧಿಗಾಗಿ 21 ಅಂಶದ ಕಾರ್ಯಕ್ರಮಗಳನ್ನು ಜಾರಿಮಾಡುತ್ತಿದೆ. 2015–16ರ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಪ್ರಸ್ತಾಪಿಸಿದ್ದಾರೆ

### 1. ಆಟದ ಮೈದಾನ

**ಯೋಜನೆಯ ಪರಿಚಯ**

ನಮ್ಮ ರಾಜ್ಯದ ಹಳ್ಳಿಗಳಲ್ಲಿ ಕ್ರೀಡಾಪಟುಗಳಿಗೆ ಕೊರತೆ ಇಲ್ಲ. ಆದರೆ ಗ್ರಾಮಗಳಲ್ಲಿ ಪೂರಕವಾದ ಕ್ರೀಡಾ ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಗ್ರಾಮೀಣ ಪ್ರತಿಭೆಗಳನ್ನು ಹೊರ ತರಲು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿಯಲ್ಲಿ ಆಟದ ಮೈದಾನವನ್ನು ನಿರ್ಮಿಸಲು

ಸರ್ಕಾರವು ರೂಪುರೇಷೆಯನ್ನು ಸಿದ್ಧಪಡಿಸಿದೆ. ನಮ್ಮ ಗ್ರಾಮೀಣ ಸಾಂಸ್ಕೃತಿಕ ಆಟಗಳಾದ ಮಲ್ಲಕಂಬ, ಕಬ್ಬಡಿ, ಕೋಕೋ, ಚಿನ್ನಿದಾಂಡ, ಮುಂತಾದವುಗಳನ್ನು ಪ್ರೋತ್ಸಾಹಿಸುವುದು ಸರ್ಕಾರದ ಕರ್ತವ್ಯವಾಗಿದೆ. ಆದುದರಿಂದ, ಗ್ರಾಮೀಣ ಆಟದ ಮೈದಾನಗಳನ್ನು ಅಭಿವೃದ್ದಿ ಪಡಿಸಲು ಆದ್ಯತೆ ನೀಡಿದೆ.

**ಉದ್ದೇಶಗಳು**

- ವಿದ್ಯಾರ್ಥಿಗಳಲ್ಲಿ, ಯುವಕ / ಯವತಿಯರಲ್ಲಿ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸುವುದು
- ಜನಪದ ಕ್ರೀಡೆಗಳನ್ನು ಪ್ರೋತ್ಸಾಹಿಸುವುದು
- ಸಧೃಡ ಮತ್ತು ಸಶಕ್ತ ಸಮಾಜ ನಿರ್ಮಾಣ ಮಾಡುವುದು
- ವಿದ್ಯಾರ್ಥಿಗಳಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು
- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಕಾಮಗಾರಿ ಅನುಷ್ಠಾನ ಮಾಡುವ ಮೂಲಕ ಮಾನವ ದಿನಗಳನ್ನು ಸೃಜಿಸುವುದು.

**ಮಾನದಂಡಗಳು:**

- ಒಂದು ಗ್ರಾಮದಲ್ಲಿ ಕನಿಷ್ಟ ಒಂದು ಆಟದ ಮೈದಾನ ನಿರ್ಮಾಣ
- ಯುವಜನಾ ಸೇವಾ ಮತ್ತು ಕ್ರೀಡಾ ಇಲಾಖೆ ರೂಪಿಸಿರುವ ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್ ಅಭಿಯಾನದ ಮಾರ್ಗಸೂಚಿಯಂತೆ ನಿರ್ಮಾಣ
- ಮೈದಾನವನ್ನು ಕ್ರೀಡೆಗಳಿಗೆ ಮಾತ್ರ ಬಳಸುವುದು
- ಆಟದ ಮೈದಾನದ ಗಾತ್ರವನ್ನು ಅಂದಾಜು ಪಟ್ಟಿಯಂತೆ ನಿರ್ಮಾಣ ಮಾಡುವುದು
- ಸದರಿ ಕಾಮಗಾರಿಯ ಕೂಲಿ ಮತ್ತು ಸಾಮಾಗ್ರಿ ವೆಚ್ಚವು 60:40 ಅನುಪಾತದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಿರ್ಮಿಸುವುದು
- ಆಟದ ಮೈದಾನದ ನಿರ್ಮಾಣಕ್ಕೆ ಹೆಚ್ಚಿನ ಮೊತ್ತದ ವೆಚ್ಚವನ್ನು ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್ ಆಭಿಯಾನ ಯೋಜನೆಯ ಜೊತೆ ಒಗ್ಗೂಡಿಸುವುದು

**ಕಾಮಗಾರಿ ಅನುಷ್ಠಾನದಲ್ಲಿ ಗಮನಿಸಬೇಕಾದ ಅಂಶ**

- ಹಾಜರಾತಿ ಪಟ್ಟಿಯನ್ನು ಕಾಮಗಾರಿ ಸ್ಥಳದಲ್ಲಿ ನಿರ್ವಹಿಸುವುದು
- ಕೂಲಿ ಮತ್ತು ಸಾಮಗ್ರಿ ವೆಚ್ಚದ ಹಣವನ್ನು ಇ–ಎಫ್.ಎಂ.ಎಸ್ ಮೂಲಕ ಪಾವತಿಸುವುದು
- ಗುತ್ತಿಗೆದಾರ ಮತ್ತು ಯಂತ್ರಗಳನ್ನು ನಿಷೇದಿಸುವುದು
- ಸಾಮಾಜಿಕ ಪರಿಶೋಧನೆ ಗ್ರಾಮ ಸಭೆ ನಡೆಸುವುದು

**ಅನುಷ್ಠಾನ ವ್ಯವಸ್ಥೆ**

- ಆಟದ ಮೈದಾನ ಕಾಮಗಾರಿಯು ಗ್ರಾಮಸಭೆ ಮತ್ತು ಗ್ರಾಮ ಪಂಚಾಯಿತಿಯಿಂದ ಅನುಮೋದನೆಯಾಗಿರಬೇಕು
- ಮಹಾತ್ಮಾ ಗಾಂಧಿ ಎನ್ಆರ್ಇಜಿ ಯೋಜನೆಯಡಿ ಗುರುತಿಸಿದ ವಾರ್ಷಿಕ ಕಾಮಗಾರಿ ಪಟ್ಟಿಯಲ್ಲಿರಬೇಕು
- ಯೋಜನೆಗೆ ಸರ್ಕಾರವು ಆದೇಶಿಸಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸಕ್ಷಮ ಅಧಿಕಾರಿಗಳಿಂದ ಪಡೆದಿರಬೇಕು
- ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್ ಅಭಿಯಾನ ಇವರು ಸೂಚಿಸಿರುವ ಮಾದರಿ ಅಂದಾಜು ಪತ್ರಿಕೆ ಮತ್ತು ನಕ್ಷೆಯಂತೆ ಆಟದ ಮೈದಾನವನ್ನು ನಿರ್ಮಿಸುವುದು
- ಸೂಚಿಸಿರುವ ಅಂದಾಜು ವೆಚ್ಚದ ದರಗಳು ಸ್ಥಳೀಯ ಪರಿಸ್ಥಿತಿಗಳಿಗೆ ಅನುಕೂಲವಾಗದಿದ್ದರೆ ಬದಲಾಯಿಸಿಕೊಳ್ಳಬಹುದಾಗಿರುತ್ತದೆ.

| ಕ್ರ.ಸಂ. | ಕಾಮಗಾರಿಯ ಶೀರ್ಷಿಕೆ | ಕೂಲಿ | ಸಾಮಗ್ರಿ | ಘಟಕ ವೆಚ್ಚ |
|---|---|---|---|---|
| 01 | ವಾಲಿಬಾಲ್ ಅಂಕಣ | 29,857 (71%) | 12,143 (29%) | 42,000 |
| 02 | ಖೋಖೋ ಅಂಕಣ | 79,618 (76%) | 24,382 (24%) | 1,04,000 |
| 03 | ಕಬಡ್ಡಿ ಅಂಕಣ | 23,959 (70%) | 10,041 (30%) | 34,000 |

## 2. ರೈತರ ಭೂ  ಅಭಿವದ್ಧಿ

73ನೇ ತಿದ್ದುಪಡಿಯಂತೆ ಆರ್ಥಿಕ ವಿಕಾಸ ಮತ್ತು ಸಾಮಾಜಿಕ ನ್ಯಾಯ ನೀಡುವುದು ಪಂಚಾಯತಿಗಳ ಮೂಲಭೂತ ಹಕ್ಕಾಗಿದೆ. ಸಾಮಾಜಿಕ ಅಸಮಾನತೆಯನ್ನು ಕೆಳವರ್ಗದವರು ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತೀ ಸಣ್ಣ ರೈತರು ಇತರೆ ಅರ್ಹ ವೈಯಕ್ತಿಕ ಫಲಾನುಭವಿಗಳಿಗೆ, ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ, ಲಿಂಗತಾರತಮ್ಯ ಹಾಗೂ ಸಾಮಾಜಿಕ ನ್ಯಾಯ ನೀಡುವುದು.  ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಅಧಿನಿಯಮವು ಸ್ಥಳೀಯ ಬದುಕಿನ ಸಮಸ್ಯೆಗಳಿಗೆ ಸ್ಥಳೀಯವಾಗಿ ಪರಿಹಾರವನ್ನು ಕಲ್ಪಿಸಿದೆ. ಯೋಜನೆಯಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ನೀಡಿ ಬಡತನ ನಿವಾರಿಸಲು  ಗುರಿ ಹೊಂದಲಾಗಿದೆ.

**ಯೋಜನೆಯ ಗುರಿ**

- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಅನುಸೂಚಿ ಕಾಮಗಾರಿಗಳ ಪ್ರವರ್ಗ 2 ರಲ್ಲಿ ವೈಯಕ್ತಿಕ ಫಲಾನುಭವಿಗಳ ಜಮೀನುಗಳಲ್ಲಿ ನೀರಾವರಿ ಸೌಲಭ್ಯ, ಕೃಷಿ ಹೊಂಡ, ತೋಟಗಾರಿಕೆ, ಅರಣ್ಯೀಕರಣ, ಭೂ ಅಭಿವೃದ್ದಿ ಕಾಮಗಾರಿಗಳನ್ನು ಮಡಲು ಅವಕಾಶ ಕಲ್ಪಿಸಲಾಗಿದೆ.

**ಯೋಜನೆಯ ವಿವರ**

- ಕಾರ್ಮಿಕರ ಬೇಡಿಕೆಯ ಆಧಾರಿತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು
- ಗ್ರಾಮೀಣ ಪ್ರದೇಶದ ಅರ್ಹ ಫಲಾನುಭವಿಗಳ ಜಮೀನುಗಳಲ್ಲಿ ನೀರಾವರಿ ಸೌಲಭ್ಯ, ತೋಟಗಾರಿಕೆ, ಗಿಡ ನೆಡುವುದು, ನೆಡು ತೋಪು, ಬದು ನಿರ್ಮಾಣ, ಕೃಷಿ ಹೊಂಡ ಭೂ ಅಭಿವೃದ್ದಿ ಕಾಮಗಾರಿಗಳನ್ನು ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಮಾರ್ಗಸೂಚಿಯಂತೆ ಇತರೆ ಇಲಾಖೆಗಳ ಕಾರ್ಯಕ್ರಮಗಳನ್ವಯ ಒಗ್ಗೂಡಿಸುವಿಕೆ ಮೂಲಕ ನಿರ್ವಹಿಸುವುದು
- ಭೂ ಅಭಿವೃದ್ದಿ, ಬದು ನಿರ್ಮಾಣ ಇತರ ಮಣ್ಣಿನ ಕೆಲಸಗಳನ್ನು ಜಲಾನಯನ ಮಾದರಿಯಂತೆ ಪ್ರತಿ ಎಕರೆಗೆ ರೂ. 10,000/–ಗಳಿಗೆ ಸೀಮಿತಗೊಳಿಸತಕ್ಕದ್ದು.
- ತೋಟಗಾರಿಕೆ, ಗಿಡ ಬೆಳೆಸುವುದು, ಹಾಗೂ ಕೃಷಿ ಹೊಂಡ ನಿರ್ಮಾಣ ಮಾಡುವುದು ಕಡ್ಡಾಯ.

## 3. ರೈತರ ಕಣ

"ನಮ್ಮ ದೇಶ ಹಳ್ಳಿಗಳ ದೇಶ" ಕೃಷಿ ನಂಬಿ ಬದುಕುತ್ತಿರುವ ಕುಟುಂಬಗಳ ಪ್ರಮಾಣ ಅಧಿಕ. ಕೃಷಿ ಸಂಶೋಧನೆಯಿಂದ ಸುಧಾರಿತ ಬೀಜಗಳ ಉತ್ಪಾದನೆ, ನೀರಾವರಿ ಸೌಲಭ್ಯವಿದೆ. ಒಕ್ಕಣೆಯಲ್ಲಿ ರೈತರು ಸೋತಿದ್ದಾರೆ. ರೈತರು ಹಿಂದೆ ಕಣ ಮಾಡುತ್ತಿದ್ದರು, ಪವಿತ್ರವಾದ ಭಾವನೆ ಇತ್ತು. ಈಗ ಕಣಗಳು ಕಣ್ಮರೆಯಾಗಿವೆ. ರಸ್ತೆಗಳಲ್ಲಿ ಒಕ್ಕಣೆ ಮಾಡುತ್ತಿರುವುದರಿಂದ ವಾಹನ ಸಂಚಾರದಿಂದ, ಮಳೆಯಿಂದ ದವಸ–ಧ್ಯಾನಗಳು ನಷ್ಟವಾಗುತ್ತಿವೆ ಹಾಗೂ ರೋಗ–ರುಜಿನಗಳ ವಾಹಕವಾಗಿ ಆಹಾರ ಪದಾರ್ಥಗಳು ಗುಣಮಟ್ಟವನ್ನು ಕಳೆದುಕೊಳ್ಳುತ್ತಿವೆ. ರಸ್ತೆಗಳಲ್ಲಿ ಒಕ್ಕಣೆ ಮಾಡುವುದರಿಂದ ಜನರಿಗೆ ಮತ್ತು ವಾಹನಗಳಿಗೆ ತೊಂದರೆಯಾಗುತ್ತಿದೆ. ಧಾನ್ಯಗಳಲ್ಲಿ ಶೇ.8–10 ರಷ್ಟು ತೇವಾಂಶವನ್ನು ಕಾಪಾಡುವುದು ಅವಶ್ಯಕವಾಗಿದೆ. ಗ್ರಾಮ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಕ್ಕಣೆ ಮಾಡಲು ಸಂಸ್ಕರಿಸುವ ಯಂತ್ರಗಳ ಬಳಕೆಯಾಬೇಕು. ಅಕಾಲಿಕ ಮಳೆಯಿಂದ ರಕ್ಷಿಸಲು ಉಗ್ರಾಣಗಳು ಮತ್ತು ಸರ್ವಋತು ಕಣಗಳನ್ನು ನಿರ್ಮಿಸಿ ನಿರ್ವಹಣೆ ಮಾಡುವುದು ಅಗತ್ಯವಾಗಿದೆ.

### ಯೋಜನೆಯ ವಿವರ

- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೆ ಲಭ್ಯವಿರುವ ಸರ್ಕಾರದ ಅಥವಾ ಒಪ್ಪಿಗೆ ಪಡೆದು ಖಾಸಗಿ ಜಾಗವನ್ನು ಬಳಸಿಕೊಂಡು ರೈತರಿಗೆ ಅನುಕೂಲವಾಗುವಂತೆ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ 9ಮೀ X 9ಮೀ ಅಳತೆಯ ಒಕ್ಕಣೆ ಕಣವನ್ನು ನಿರ್ಮಿಸಲು ಅವಕಾಶ ಕಲ್ಪಿಸಿದೆ.

- ಕಣವನ್ನು ನಿರ್ಮಿಸುವ ಕಾಮಗಾರಿಯನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಕಾಯ್ದೆಯ ಅನುಸೂಚಿ 1ರ ಪ್ರಕಾರ ಪ್ರವರ್ಗ ತೆಗೆದುಕೊಳ್ಳಬಹುದು.

- ಒಂದು ವೇಳೆ ಕಾಮಗಾರಿಗೆ ಆದ ಖರ್ಚು ಅಂದಾಜು ಪಟ್ಟಿಗಿಂತ ಕಡಿಮೆಯಾದಲ್ಲಿ ಅದಕ್ಕೆ ಸೀಮಿತಗೊಳಿಸುವುದು

- ಅಂದಾಜು ಪಟ್ಟಿ ಮತ್ತು ನಕ್ಷೆಯು ಸ್ಥಳೀಯ ಪರಿಸ್ಥಿತಿಗಳಿಗೆ ಯೋಗ್ಯವಾಗದೆ ಇದ್ದಲ್ಲಿ ಅಗತ್ಯವೆನಿಸಬಹುದಾದ ಅಳತೆಗಳನ್ನು ಬದಲಾವಣೆ ಮಾಡುವುದು

**ಕಣವನ್ನು ಯಾವ ಜಾಗದಲ್ಲಿ ನಿರ್ಮಿಸಬಹುದು**

- ಊರಿಗೆ ಹತ್ತಿರದಲ್ಲಿ ದೊರೆಯುವ ಯಾವುದಾದರೂ ಸರ್ಕಾರಿ ಜಮೀನಿನಲ್ಲಿ 9ಮೀ X 9ಮೀ ಅಳತೆಯ ಕಣವನ್ನು ನಿರ್ಮಿಸಬಹುದು
- ಸರ್ಕಾರಿ ಜಮೀನು ದೊರೆಯದಿದ್ದಲ್ಲಿ ದಾನಿಗಳಿಂದ ಕೊಡುಗೆ ರೂಪದಲ್ಲಿ ಜಮೀನನ್ನು ಪಡೆದು ಗ್ರಾಮ ಪಂಚಾಯಿತಿ ಹೆಸರಿಗೆ ನೊಂದಣಿ ಮಾಡಿಸಿಕೊಂಡು ಕಣವನ್ನು ನಿರ್ಮಿಸಬಹುದು
- ಕಣದ ನಿರ್ವಹಣೆಗಾಗಿ ನಿರ್ದಿಷ್ಟ ಪಡಿಸಿದ ಕನಿಷ್ಟ ಬಾಡಿಗೆ ದರವನ್ನು ರೈತರಿಂದ ಪಡೆಯುವುದು
- ಒಕ್ಕಲುತನಕ್ಕಾಗಿ ಕಣವನ್ನು ನಿರ್ಮಿಸಲು ಬೇಡಿಕೆ ಸಲ್ಲಿಸಿದವರಲ್ಲಿ ಮೊದಲಿಗರಿಗೆ ಮೊದಲ ಆದ್ಯತೆ ನೀಡುವುದು
- ಒಬ್ಬ ರೈತನಿಗೆ 3 ದಿನಗಳಿಗಿಂತ ಹೆಚ್ಚು ಕಾಲ ಕಣವನ್ನು ಬಾಡಿಗೆ ಕೊಡಲಾಗುವುದಿಲ್ಲ. ಬೇಡಿಕೆ ಇಲ್ಲದಿರುವ ದಿನಗಳಲ್ಲಿ ಹೆಚ್ಚುವರಿ ದಿನಗಳಿಗೆ ನಿಗಧಿತ ಶುಲ್ಕಕ್ಕಿಂತ ಹೆಚ್ಚು ಶುಲ್ಕ ವಿಧಿಸಿ ಬಾಡಿಗೆ ನೀಡಬಹುದು. ಬಾಡಿಗೆ ಪಡೆದ ರೈತರು ಕಣವನ್ನು ತೆರವು ಮಾಡಿ ಕೊಡುವಲ್ಲಿ ವಿಳಂಬವಾದರೆ ದಂಡವನ್ನು ವಿಧಿಸುವುದು

| ಕ್ರ.ಸಂ. | ಕಾಮಗಾರಿಯ ವಿವರ | ಅಂದಾಜು ವೆಚ್ಚ | ಕೂಲಿ ವೆಚ್ಚ | ಸಾಮಾಗ್ರಿ ವೆಚ್ಚ | ಅಳತೆ ಪ್ರಮಾಣ |
|---|---|---|---|---|---|
| 1 | ರೈತರ ಕಣ | 1,14,000/- | 19,777/-<br>(17.35%) | 94,223/-<br>(82.65%) | 9mX<br>9m |

**4. ಕುರಿ / ದನದ ದೊಡ್ಡಿ**

ಭಾರತವು ಹಳ್ಳಿಗಳ ದೇಶ. ಗ್ರಾಮೀಣ ಜನರು ಜೀವನೋಪಾಯಕ್ಕಗಿ ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಾದ ಪಶುಸಂಗೋಪನೆಯಂತಹ ಕಸಬುಗಳನ್ನು ಅವಲಂಬಿಸಿರುತ್ತಾರೆ. ಗ್ರಾಮೀಣ ಜನರ ಜೀವನೋಪಾಯಕ್ಕೆ ಒಂದು ಒಳ್ಳೆಯ ದಾರಿಯಾಗುವ ಉದ್ದೇಶದಿಂದ ಸರ್ಕಾರವು ಗ್ರಾಮೀಣ ಜನರಿಗೆ ದನದ ಕೊಟ್ಟಿಗೆ, ಕುರಿ/ಮೇಕೆ ದೊಡ್ಡಿ ಹಾಗೂ ವೈಯಕ್ತಿಕ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ನಿರ್ಮಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಳ್ಳಲು ಒತ್ತನ್ನು ನೀಡಿದೆ.

**ವೈಯಕ್ತಿಕ ಭೂ ಅಭಿವೃದ್ದಿ ಕಾಮಗಾರಿಗಳ ಮಹತ್ವ**

ಗ್ರಾಮೀಣ ಪ್ರದೇಶದ ರೈತರ ಜಮೀನುಗಳಲ್ಲಿ ಕೃಷಿಯೇತರ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಪಶು ಸಂಗೋಪನಾ ಇಲಾಖೆಯ ಕಾಮಗಾರಿಗಳಾದ ದನದ ಕೊಟ್ಟಿಗೆ, ಕೋಳಿ ಸಾಕಾಣಿಕೆ ಕೇಂದ್ರ, ಮತ್ತು ಕುರಿ ದೊಡ್ಡಿ ಇವುಗಳನ್ನು ಆದ್ಯತಾ ಕಾಮಗಾರಿಗಳ 2ನೇ ಪ್ರವರ್ಗದಡಿ ತೆಗೆದುಕೊಳ್ಳಲು ಯೋಜನೆಯ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿದೆ. ಇವುಗಳ ನಿರ್ಮಾಣದಿಂದ ರೈತರು ದನ/ಕುರಿ/ಕೋಳಿ ಸಾಕಾಣಿಕೆ ಕೈಗೊಳ್ಳಲು ಸಹಕಾರಿಯಾಗುತ್ತದೆ.

**ಯೋಜನೆಯ ಫಲಾನುಭವಿಗಳು**

ಕುರಿ / ದನದ ದೊಡ್ಡಿಯ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲೆಮಾರಿ ಬುಡಕಟ್ಟು ಜನಾಂಗದವರು, ಪ್ರಕಟಣೆಯಿಂದ ತೆಗೆದುಹಾಕಿದ ಬುಡಕಟ್ಟು ಜನಾಂಗದವರು, ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ವರ್ಗಗಳ ಕುಟುಂಬಗಳು, ಸ್ತ್ರೀ ಪ್ರಧಾನ ಕುಟುಂಬಗಳು, ವಿಕಲಚೇತನ ಪ್ರಧಾನ ಕುಟುಂಬ ಗಳು, ಭೂ ಸುಧಾರಣಾ ಫಲಾನುಭವಿಗಳು, ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳು, ಅನುಸೂಚಿತ ಬುಡಕಟ್ಟು ಹಾಗೂ ಇತರೆ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯಮಾಡುವ ಅಧಿನಿಯಮ 2006 (2007 ರ 2) ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

**ಕುರಿ/ದನದ ದೊಡ್ಡಿ ನಿರ್ಮಾಣಕ್ಕೆ ಒದಗಿಸಬೇಕಾದ ದಾಖಲೆಗಳು**

- ✓ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಭೂ–ಸುಧಾರಣೆ, ಸಣ್ಣ ಅತೀ ಸಣ್ಣ ರೈತರು, ಅನುಸೂಚಿತ ಬುಡಕಟ್ಟು ಮತ್ತು ಪಾರಂಪರಿಕ ಅರಣ್ಯವಾಸಿ, ಎಸ್.ಸಿ. ಎಸ್.ಟಿ ಫಲಾನುಭವಿಗಳು – ಜಾತಿ ಮತ್ತು ಆದಾಯವನ್ನು ದೃಢೀಕರಿಸಿದ ಪ್ರಮಾಣ ಪತ್ರವನ್ನು ತಹಶೀಲ್ದಾರ್ ಅಥವಾ ಅಧಿಕೃತ ಕಂದಾಯ ಇಲಾಖೆಯ ಅಧಿಕಾರಿಗಳು ಇವರಿಂದ ಪಡೆದು ಸಲ್ಲಿಸಬೇಕು

- ✓ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವ ಕುಟುಂಬಗಳು – ಅಹಾರ ಇಲಾಖೆಯವರು ನೀಡುವ ಪಡಿತರ ಚೀಟಿಯನ್ನು ಒದಗಿಸಬೇಕು

- ✓ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳು – ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಪ್ರಮಾಣೀಕರಿಸಿದ ಪತ್ರವನ್ನು ಒದಗಿಸಬೇಕು.

**ಮಾದರಿ ಅಂದಾಜು ವೆಚ್ಚದ ಪತ್ರಿಕೆ ಮತ್ತು ನಕ್ಷೆ**

- ✓ 100 ಕೋಳಿಗಳಿಗೆ ಸ್ಥಳಾವಕಾಶವನ್ನು ನಿರ್ಮಾಣ ಮಾಡುವ ದೊಡ್ಡಿಯ 3.75 ಮೀ X 2 ಮೀ ಅಳತೆಯ ಅಂದಾಜು ವೆಚ್ಚದ ದರ ರೂ. 40,000/–

- ✓ 6 ವಯಸ್ಕ ಕುರಿ/ಮೇಕೆಗಳು ಮತ್ತು ನಾಲ್ಕು ಮರಿಗಳಿಗೆ ಸ್ಥಳಾವಕಾಶವನ್ನು ನಿರ್ಮಾಣ ಮಾಡುವ ದೊಡ್ಡಿಯ 3.74ಮೀ 2 ಮೀ ಅಳತೆಯ ಅಂದಾಜು ವೆಚ್ಚದ ದರ ರೂ. 35,899/.–

- ✓ 6 ಹಸುಗಳು/ಎಮ್ಮೆಗಳಿಗೆ ಸ್ಥಳಾವಕಾಶವನ್ನು ನಿರ್ಮಾಣ ಸ್ಥಳಾವಕಾಶವನ್ನು ನಿರ್ಮಾಣ ಮಾಡುವ ದೊಡ್ಡಿಯ7.7ಮೀ 3.5 ಮೀ ಅಳತೆಯ ಅಂದಾಜು ವೆಚ್ಚದ ದರ ರೂ. 35,200/–

- ✓ ಸದರಿ ನಕ್ಷೆಯ ಅಳತೆಗಳನ್ನು ಮತ್ತು ಅಂದಾಜು ವೆಚ್ಚದ ದರಗಳನ್ನು ಸ್ಥಳೀಯ ಪರಿಸ್ಥಿತಿ ಹಾಗೂ ಅವಶ್ಯಕತೆಕಗೆ ಅನುಗುಣವಾಗಿ ಮಾರ್ಪಡಿಸಿಕೊಳ್ಳಬಹುದು

5. **ಸ್ಮಶಾನ ಅಭಿವೃದ್ಧಿ**

ಗೌರವಯುತವಾದ ಬದುಕನ್ನು ಸಾಗಿಸಿ ಕೊನೆಗೆ ಸಾವನಪ್ಪಿದಾಗ ಅಂತ್ಯ ಸಂಸ್ಕಾರವು ಒಂದು ಭಾವನಾತ್ಮಕ ವಿಷಯವಾಗಿದೆ. ಎಲ್ಲಾ ಪಂಗಡ ಜಾತಿಯವರಿಗೂ ಅವರವರ ಶವ ಸಂಸ್ಕಾರ ಪದ್ದತಿಯನ್ನು ಆಚರಿಸುತ್ತಾರೆ. ಶವ ಸಂಸ್ಕಾರ ಮಾಡಲು ರುದ್ರಭೂಮಿ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಅಂತಹ ಭೂಮಿಗಳು ಅತಿಕ್ರಮವಾಗಿವೆ. ಅವುಗಳಿಗೆ ಭೂಮಿ ಇದ್ದರೂ ಸರಿಯಾದ ದಾರಿ, ಗೋಡೆ, ಕುಡಿಯುವ ನೀರು, ಗಿಡ ಮರಗಳಿರುವುದಿಲ್ಲ. ಇದನ್ನು ಗಮನಿಸಿ ಸರ್ಕಾರ ಸ್ಮಶಾನ ಅಬಿವೃದ್ಧಿ ಕಾರ್ಯಕ್ರಮ ಹಮ್ಮಿಕೊಂಡಿದೆ.

**ಯೋಜನೆಯ ವಿವರಗಳು**

- ಸಮೂದಾಯದ ಆಸ್ತಿ ಎಂದು ಪರಿಗಣಿಸಿ ಸಾಮಾಜಿಕ ಅರಣ್ಯೀಕರಣದಡಿ ಗಿಡಮರ ಬೆಳೆಸುವುದು
- ಜೈವಿಕ ಬೇಲಿ ನಿರ್ಮಿಸುವುದು
- "ನಮ್ಮ ಹೊಲ ನಮ್ಮ ದಾರಿ" ಯೋಜನೆಯಡಿ ಈಗಾಗಲೇ ಆದೇಶಿಸಿರುವಂತೆ ರಸ್ತೆ ನಿರ್ಮಾಣ ಮಾಡುವುದು. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/472/ಉಖಾಯೋ/2013 ದಿ: 13-08-13ರಲ್ಲಿ ಹಾಗೂ ದಿ: 22-08-2013 ರ ತಿದ್ದುಪಡಿಯಲ್ಲಿನ ಅವಕಾಶದನ್ವಯ ಈ ಕಾಮಗಾರಿಗಳನ್ನು ಜಾರಿ ಮಾಡುವುದು

ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದ ಅಡಿಯಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿಶೇ.8ರಷ್ಟು ಅನುದಾನವನ್ನು ರುದ್ರಭೂಮಿ/ಸ್ಮಶಾನ ಅಬಿವೃದ್ದಿ ಮಾಡಲು ನಿಗಧಿಪಡಿಸಿರುತ್ತದೆ. ಸರ್ಕಾರವು ಆದೇಶ ಸಂ: ಗ್ರಾಅಪ/37/ಸುಗ್ರಯೋ/2013 ಬೆಂಗಳೂರು ದಿ: 12-07-2013 ರಲ್ಲಿ ವಿವರಗಳನ್ನು ನಮೂದಿಸಿ ಈಗಾಗಲೇ ಎಲ್ಲಾ ಅನುಷ್ಟಾನ ಇಲಾಖೆಗಳಾದ ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಗ್ರಾಮ ಪಂಚಾಯಿತಿ ಹಾಗೂ ಯೋಜನೆಯ ತಾಂತ್ರಿಕ ಸಹಾಯಕರುಗಳಿಗೆ ತಲುಪಿಸಿದೆ. ಈ ಅನುದಾನವನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಅನುದಾನದೊಂದಿಗೆ ಒಗ್ಗೂಡಿಸಿಕೊಳ್ಳುವುದು. ಅನುದಾನವನ್ನು ಒಗ್ಗೂಡಿಸುವಿಕೆ ಮೂಲಕ ಆಯಾ ಯೋಜನೆಯಲ್ಲಿ ಅನುಮತಿಸಿದ ಕಾಮಗಾರಿಗಳಿಗೆ ಬಳಸಿಕೊಂಡು ಸ್ಮಶಾನವನ್ನು ನಿರ್ಮಾಣ ಮಾಡುವುದು. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದ ಅಡಿಯಲ್ಲಿ ಆಯ್ಕೆಯಾದ ಗ್ರಾಮ ಗಳಲ್ಲಿ ಶೇ. 8 ರಷ್ಟು ಅನುದಾನವನ್ನು ರುದ್ರಭೂಮಿ ನಿರ್ಮಾಣ ಮಾಡಲು ಉಪಯೋಗಿಸಿಕೊಳ್ಳುವುದು. ಸುವರ್ಣ ಗ್ರಾಮೋದಯ ಯೋಜನೆಗೆ ಸಂಬಂಧಿಸಿದಂತೆ ಬಳಸಿದ ಅನುದಾನದ ಲೆಕ್ಕಪತ್ರದ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

**6. 'ನಮ್ಮ ಹೊಲ ನಮ್ಮ ದಾರಿ**

'ನಮ್ಮ ಹೊಲ ನಮ್ಮ ದಾರಿ' ಇದೊಂದು ವಿಶಿಷ್ಠ ಯೋಜನೆ. ಗ್ರಾಮೀಣ ರೈತರ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಬೆಳೆದ ಬೆಳೆಯನ್ನು ಮನೆಗೆ ತರಲು, ಮಾರಾಟ ಮಾಡಲು, ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಕಲ್ಪಿಸಲು ಸರ್ಕಾರ ಆಯವ್ಯಯದಲ್ಲಿ 'ನಮ್ಮ ಹೊಲ ನಮ್ಮ ದಾರಿ' ಯನ್ನು ಯೋಜನೆಯನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅನುಷ್ಠಾನ ಮಾಡುತ್ತಿದೆ.

**ಯೋಜನೆಯ ಅನುಷ್ಠಾನ:**

- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿಯಲ್ಲಿ ಗದ್ದೆ, ತೋಟ, ಜಮೀನುಗಳಿಗೆ ಸಂಪರ್ಕ ಕಲ್ಪಿಸುವುದು. ಅನುಸೂಚಿ 1ರ 4ನೇ ಪ್ರವರ್ಗದಂತೆ ಕಾಮಗಾರಿಗಳನ್ನು ಶೇ.25ರ ಗರಿಷ್ಠ ಮಿತಿಯಲ್ಲಿ ಮಾಡುವುದು.
- ಕಂದಾಯ ಇಲಾಖೆಯು ಸರ್ವೆ ಮಾಡಿರುವ ಗ್ರಾಮ ನಕಾಶೆ ದಾಖಲೆಯಲ್ಲಿರುವ ಸಾರ್ವಜನಿಕ ರಸ್ತೆಗಳನ್ನು ತೆಗೆದುಕೊಳ್ಳುವುದು
- ಒಂದು ವೇಳೆ ರಸ್ತೆ ಸಂಪರ್ಕಕ್ಕಾಗಿ ಖಾಸಗಿ ಸ್ವತ್ತಿನಲ್ಲಿ ಈ ಕಾಮಗಾರಿಯನ್ನು ಮಾಡಬೇಕಾದಲ್ಲಿ ನೊಂದಾಯಿತ ದಾನ ಪತ್ರವನ್ನು (Registered Gift Deed) ಭೂ ಮಾಲೀಕರಿಂದ ಗ್ರಾಮ ಪಂಚಾಯಿತಿಯ ಹೆಸರಿಗೆ ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ನೊಂದಣೆ ಮಾಡಿಕೊಳ್ಳುವುದು
- ಸರ್ವಋತು ಸಂಪರ್ಕ ರಸ್ತೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸಂಪರ್ಕದಡಿ ಬರುವ ಚಿಕ್ಕ ಸೇತುವೆಗಳು, ಮೋರಿಗಳು ಇತ್ಯಾದಿ ಸಹ ಕೈಗೆತ್ತಿಕೊಳ್ಳುವುದು
- ಕಲ್ಪಿಸಿದ ಸರ್ವಋತು ಸಂಪರ್ಕ ರಸ್ತೆಗಳನ್ನು ದಾರಿಯನ್ನಾಗಿ ಮಾಡಲು ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆ ಮೂಲಕ ಆಯಾ ಯೋಜನೆಯ ಮಾರ್ಗಸೂಚಿಗಳಂತೆ ಅನುಷ್ಠಾನಗೊಳಿಸುವುದು
- ಕಾಮಗಾರಿಯನ್ನು ನಿರ್ವಹಿಸುವಾಗ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತವನ್ನು ಕಡ್ಡಾಯವಾಗಿ ಪಾಲನೆ ಮಾಡುವುದು
- ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನಯೋಜನೆ ಮಾರ್ಗಸೂಚಿಗಳ ಅಧ್ಯಾಯ – 7 ರ ಕಂಡಿಕೆ 7.3.8 ರ ಪ್ರಕಾರ ಭೂಸ್ವಾಧೀನಕ್ಕೆ ಎನ್‌ಆರ್‌ಇಜಿ ಯೋಜನಹಣವನ್ನು ಬಳಸುವಂತಿಲ್ಲ ಮತ್ತು ಗುತ್ತಿಗೆದಾರರಿಗೆ ಅನುಮತಿಸುವಂತಿಲ್ಲ
- ಕಾಮಗಾರಿಯ ಅನುಷ್ಠಾನವನ್ನು ಸಾಕಷ್ಟು ಕೂಲಿ ಬೇಡಿಕೆ ಇರುವುದನ್ನು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸುವುದು
- ಕಾಮಗಾರಿಯ ಅಕುಶಲ ಕೆಲಸವನ್ನು ಕೇವಲ ನೊಂದಾಯಿತ ಕೂಲಿಕಾರರಿಂದ ನಿರ್ವಹಿಸತಕ್ಕದ್ದು
- ಗುತ್ತಿಗೆದಾರರನ್ನು ಅನುಷ್ಠಾನದಲ್ಲಿ ಬಳಸಲು ನಿಷೇಧಿಸಿದೆ.

- ಎನ್‌ಆರ್‌ಇಜಿ ಯೋಜನಯೋಜನೆಯ ಮಾರ್ಗಸೂಚಿಯಂತೆ ಕಡ್ಡಾಯವಾಗಿ ಗ್ರಾಮ ಸಭೆಯಲ್ಲಿ ಅನುಮೋದನೆಯಾದ ನಂತರ ಕ್ರಿಯಾ ಯೋಜನೆಯಲ್ಲಿ ಅಥವಾ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸುವುದು
- ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ಈಗಾಗಲೇ ಆದೇಶಿಸಿದಂತೆ ಸರ್ಕಾರದ ಆದೇಶ ಸಂ: ಗ್ರಾಅಪ/472/ಉಖಾಯೋ/2013 ಬೆಂಗಳೂರು ದಿ:13-08-2013 ಹಾಗೂ 22-08-2013 ರ ತಿದ್ದುಪಡಿಯಲ್ಲಿನ ಅವಕಾಶದನ್ವಯ ಈ ಕಾಮಗಾರಿಗಳನ್ನು ಜಾರಿ ಮಾಡುವುದು. ಅಲ್ಲದೆ ರುದ್ರ ಭೂಮಿಗಳಿಗೂ ಕೂಡ ರಸ್ತೆ ಸೌಲಭ್ಯ ಕಲ್ಪಿಸಲು ಸರ್ಕಾರವು ಆದೇಶ ಸಂ : ಗ್ರಾಅಪ/ 37/ ಸುಗ್ರಾಯೋ/2013 ಬೆಂಗಳೂರು ದಿ: 12-07-2013 ಮುಖಾಂತರ ಅವಕಾಶ ಕಲ್ಪಿಸಿದೆ.

### 7. ನಮ್ಮ ಹಳ್ಳಿ ನಮ್ಮ ನೀರು

ಪ್ರಪಂಚದಲ್ಲಿ ಎಲ್ಲರಿಗೂ ನೀರಿನ ಕೊರತೆ ಕಾಡುತ್ತಿದೆ. ಜನ ಸಂಖ್ಯೆ ಹೆಚ್ಚಾದಂತೆ ನೀರಿನ ಕೊರತೆ ಹೆಚ್ಚಾಗುತ್ತಿದೆ. ಕೈಗಾರಿಕೆ, ಕೃಷಿ, ಬೃಹತ್ ನಗರಗಳಿಂದ ಬರುವ ನೀರು ಕಲುಷಿತಗೊಂಡು ಕುಡಿಯಲು ಯೋಗ್ಯವಾಗಿರುವುದಿಲ್ಲ. ಇದರಿಂದ ನೀರಿನ ಕೊರತೆ ಜನ ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅತೀ ಆಳವಾದ ಕೊಳವೆ ಬಾವಿಗಳಿಂದ ನೀರಿನ ಅಂತರ್‌ಜಲ ಕುಸಿದಿದೆ.  ಸಾಂಪ್ರದಾಯಿಕ ಜಲ ಸಂಗ್ರಹಗಳು ವಿನಾಶದ ಅಂಚಿನಲ್ಲಿವೆ. ನೀರು ಸಂಗ್ರಹಣೆ ಕಡಿಮೆಯಾಗಿ ಹಳ್ಳಿ ಗಳಲ್ಲಿಯೂ ಕುಡಿಯುವ ನೀರಿನ ಕೊರತೆಯಿದೆ. ಬಹುಪಾಲು ಜನರು ಕೃಷಿಗೆ ಮಳೆಯ ನೀರನ್ನೆ ನಂಬಿದ್ದಾರೆ. ಕೃಷಿಗಾಗಿ ತೋಡು ಬಾವಿ, ಕೊಳವೆ ಬಾವಿ, ಕೊಳಗಳು, ಕಲ್ಯಾಣಿಗಳು ಅಂತರ್ ಜಲದ ಅಸರೆ ಹೊಂದಿವೆ. ಮಳೆಯ ನೀರಿನ ಕೊರತೆಯಿಂದ ಕೃಷಿಯನ್ನು ಕುಂಠಿತವಾಗಿವೆ. ಅಂತರ್‌ಜಲ ಖಾಲಿ ಯಾಗಿರುವುದರಿಂದ, ಮರು ಪೂರ್ಣೆ ಸರಿಯಾಗಿ ಆಗುತ್ತಿಲ್ಲ. ನಗರೀಕರಣದಿಂದ ರಸ್ತೆಗಳನ್ನು ಮಾಡುವುದರಿಂದ ಕಾಡು, ಅಂತರ್ ಜಲ ಕಡಿಮೆಯಾಗಿವೆ. ಮಹಾತ್ಮಾಗಾಂಧಿ ಎನ್‌ಆರ್‌ಇಜಿ ಯೋಜನೆಯ ಮೂಲಕ ಅಂತರ್ ಜಲಮಟ್ಟ ಹೆಚ್ಚಿಸುವ ಕಾಮಗಾರಿಗಳನ್ನು ಕೈಗೊಂಡಿದೆ.

**ಯೋಜನೆಯ ಗುರಿ**

- ಮಳೆ ಕಡಿಮೆ ಬೀಳುವ ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ ಜಲ ಹೆಚ್ಚಿಸುವುದು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆ ಮಾಡುವುದು.
- ಮಳೆಗಾಲದ ನೀರನ್ನು ಜಲಗಾರಗಳಿಗೆ ಹರಿಸಿ ಅಂತರ್ಜಲಹೆಚ್ಚಿಸುವುದು.
- ಹೊಲಗದ್ದೆಗಳಲ್ಲಿ ಮಳೆಯ ನೀರನ್ನು ಇಂಗುವಂತೆ ಮಾಡಲು ಬದುಗಳು, ಒಡ್ಡು, ಕೃಷಿಹೊಂಡ ನಿರ್ಮಾಣ ಮಾಡುವುದು.
- ನಮ್ಮ ಹಳ್ಳಿಯ ಹಳ್ಳ ನಾಲಾಗಳಿಗೆ ಹೆಚ್ಚು ಹೆಚ್ಚು ಚೆಕ್ ಡ್ಯಾಂಗಳನ್ನು ಕಟ್ಟಬೇಕು ಹಳ್ಳ, ಬೆಟ್ಟ-ಗುಡ್ಡ ಗಳಿಂದ ಹರಿದು ಬರುವ ನೀರನ್ನು ತಡೆಯಲು ಬೆಟ್ಟ-ಗುಡ್ಡಗಳಲ್ಲಿ ಗುಂಡಿ ತೋಡವುದು, ಕಾಂಟೂರು ಬಂಡಿಂಗ್/ ಟ್ರೆಂಚಿಂಗ್ ಮಾಡಬೇಕು.
- ನೀರು ಗುಡ್ಡ – ಬೆಟ್ಟಗಳಿಂದ ಹರಿದು ಬರುವ ನೀರನ್ನು ಕೆರೆಗಳಲ್ಲಿ ಸಂಗ್ರಹವಾಗಬೇಕು.
- ಕೆರೆ-ಕಟ್ಟೆ, ಗೋಕಟ್ಟೆಗಳನ್ನು ಅತಿಕ್ರಮಣ ಮುಕ್ತವಾಗಿಸಿ ಹೂಳೆತ್ತುವ ಕೆಲಸ ಮಾಡಿ ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸುವುದು.
- ಎಲ್ಲಾ ಬೋರ್‌ವೆಲ್‌ಗಳನ್ನು ವೈಜ್ಞಾನಿಕವಾಗಿ ಮರು ಪೂರಣ ಮಾಡಬೇಕು
- ಗ್ರಾಮದಲ್ಲಿ ಹರಿಯುವ ನೀರಿನ ಮಾರ್ಗದ ಗುಂಟ ವೈಜ್ಞಾನಿಕವಾಗಿ ಇಂಗು ಗುಂಡಿಗಳನ್ನು ನಿರ್ಮಾಣ ಮಾಡಬೇಕು
- ಬೆಟ್ಟ-ಗುಡ್ಡಗಳಲ್ಲಿ ರಸ್ತೆ ಬದು, ಶಾಲೆಯ ಆವರಣದಲ್ಲಿ ಕೆರೆಯಂಗಳದಲ್ಲಿ ಗಿಡ ಮರಗಳನ್ನು ಬೆಳೆಸಬೇಕು.
- ಹಳ್ಳಿಯಲ್ಲಿ ಕಟ್ಟುವ ಹೊಸ ಮನೆಗಳ ಹಾಗೂ ಹಳ್ಳಿಯ ಇತರೆ ವಸತಿಗಳ ಛಾವಣಿಗಳ ಮಳೆ ನೀರು ಸಂಗ್ರಹ ಹಾಗೂ ನೀರು ಇಂಗಿಸುವ ಕೆಲಸ ಮಾಡಬೇಕು
- ಹಳ್ಳಿಯಲ್ಲಿ ಜಲಜಾಗೃತಿ ಮೂಡಿಸಬೇಕು. ಗೋಡೆ ಬರಹ, ಫಲಕಗಳು, ಬೀದಿ ನಾಟಕಗಳು ಸೇರಿದಂತೆ ಉಪಯುಕ್ತ ಕ್ರಮಗಳ ಮೂಲಕ ನೀರಿನ ಮಹತ್ವ ಹಾಗೂ ನೀರು ಇಂಗಿಸುವುದರ ಅವಶ್ಯಕತೆ ಬಿಂಬಿಸಬೇಕು

**ಯೋಜನೆಯ ಅನುಷ್ಠಾನ**

- ಅಂತರ್ಜಲ ಮರುಪೂರಣ ಗುಂಡಿಗಳು ಭೂಮಿಯಿಂದ ಸುಮಾರು 10 ರಿಂದ 15 ಅಡಿಯವರೆಗೆ ಪರಿಣಾಮಕಾರಿಯಾಗಬಲ್ಲವು
- ಗುಂಡಿಗಳನ್ನು ವೃತ್ತಾಕಾರ, ಆಯತಾಕಾರ ಇಲ್ಲವೆ ಅಂಡಾಕಾರದಲ್ಲಿ ಸ್ಥಳ ವಿಸ್ತಾರದ ಲಭ್ಯತೆಗನುಗುಣವಾಗಿ ತೆಗೆಯಬಹುದು.
- ವ್ಯಾಸದ ಅಳತೆ (ಆಯತಾಕಾರವಿದ್ದಲ್ಲಿ ಬದಿಯ ಅಳತೆ) 1.2 ಮೀ. ನಿಂದ 3 ಮೀ. ವರೆಗೆ ಇರಬಹುದು.
- ಗುಂಡಿಯ ಆಳದಲ್ಲಿ ಮೊದಲು ದಪ್ಪ ಜಲ್ಲಿ ಕಲ್ಲುಗಳನ್ನು ಹಾಕಿ, ನಂತರ ಮರಳಿನ ಪದರ ಹಾಕಿ, ನಂತರ ಸಣ್ಣ ಜಲ್ಲಿ ಕಲ್ಲುಗಳನ್ನು ಹರಡಿ ಅದರ ಮೇಲೆ ಎಲೆ ಮತ್ತು ಮಣ್ಣಿನ ಪದರಗಳನ್ನು ಹರಡಿ ಇಂಡು ಗುಂಡಿಯನ್ನು ನಿರ್ಮಾಣ ಮಾಡಬಹುದಾಗಿದೆ.

**8. ರಾಜೀವ್ ಗಾಂಧಿ ಸೇವಾ ಕೇಂದ್ರ**

**ಯೋಜನೆಯ ಮಹತ್ವ**

ಮಹಾತ್ಮಾಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಬ್ಲಾಕ್ ಮಟ್ಟದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರವಾಗಿ ಹಾಗೂ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಭವನವನ್ನು ನಿರ್ಮಿಸುವುದು ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳು, ಗ್ರಾಮ ಪಂಚಾಯಿತಿಗಳ ಕಚೇರಿಗಳಾಗಿರದೇ ಪಂಚಾಯಿತಿಗಳ ವಿವಿಧ ಯೋಜನೆಗಳ ಬಗ್ಗೆ ಗ್ರಾಮ ಪಂಚಾಯಿತಿಯ ಪ್ರತಿನಿಧಿಗಳು ಮತ್ತು ಕಾರ್ಯಕರ್ತರನ್ನು ಪರಸ್ಪರ ಬೇಟಿಯಾಗಿ ಜನ ಸಾಮಾನ್ಯರ ಜೊತೆ ವಿನಿಮಯ ಮಾಡಿಕೊಳ್ಳಲು ಭೌತಿಕ ಸ್ಥಳಾವಕಾಶವನ್ನು ಒದಗಿಸುತ್ತವೆ.

ಈ ಪ್ರಕಾರವಾಗಿ ದಿನಾಂಕ; 29-04-2009 ರ ಕೇಂದ್ರ ಸರ್ಕಾರದ ಪತ್ರ ಮೂಲಕದ (ದಿನಾಂಕ:09-11-2009ರ ಸರ್ಕಾರದ ಪತ್ರದಲ್ಲಿ ಪುನರುಚ್ಚರಿಸಲಾಗಿದೆ) ಬಿಆರ್‌ಜಿಎಫ್ ಅಡಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಯೊಂದಿಗೆ ಗ್ರಾಮ ಪಂಚಾಯಿತಿ ಕಟ್ಟಡಗಳನ್ನು ಮತ್ತು ನಿರ್ಮಾಣವಾದ ಸೇವಾ ಕೇಂದ್ರಗಳಲ್ಲಿ ಐಸಿಟಿ ಸೌಲಭ್ಯಗಳನ್ನು ಒದಗಿಸುವ ಸಂಬಂಧ ರಾಜ್ಯಗಳಿಗೆ ಸಲಹೆಯನ್ನು ಸೂಚಿಸಲಾಯಿತು. ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರದ ಒಂದು ವಿಭಾಗವನ್ನು ಗ್ರಾಮ ಪಂಚಾಯಿತಿಯ ಕಛೇರಿಯನ್ನಾಗಿ ಬಳಸಿಕೊಳ್ಳಬಹುದಾಗಿದೆ.

ಇದರ ನಿರ್ಮಾಣದಲ್ಲಿ ಸಾಮಗ್ರಿ ಭಾಗ ಹೆಚ್ಚಾದಲ್ಲಿ ಹೆಚ್ಚಾದ ಮೊತ್ತವನ್ನು ಶೇ. 6 ರಷ್ಟಿನ ಆಡಳಿತಾತ್ಮಕ ವೆಚ್ಚದಿಂದ ಭರಿಸಬಹುದಾಗಿರುತ್ತದೆ. ನಿರ್ಮಾಣವಾದ ಸೇವಾ ಕೇಂದ್ರಗಳಲ್ಲಿ ಐಸಿಟಿ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಆಗುವ ವೆಚ್ಚವನ್ನು ಯೋಜನೆಯ ಶೇ. 6 ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಬಹುದಾಗಿರುತ್ತದೆ.

**ಯೋಜನೆಯ ಅನುಷ್ಟಾನ**

- ಗ್ರಾಮ ಪಂಚಾಯಿತಿ, ಗ್ರಾಮ/ವಾರ್ಡ್ ಸಭೆಯಲ್ಲಿ ಆಯ್ಕೆಯಾದ ಸದರಿ ಕೇಂದ್ರದ ನಿರ್ಮಾಣದ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಯಲ್ಲಿ ಆದ್ಯತೆ ಮೇರೆಗೆ ಅನುಮೋದಿಸುವುದು

- ಸಹಾಯಕ ಅಭಿಯಂತರರು ತಯಾರಿಸಿದ ನಕ್ಷೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಿಂದ ಅನುಮೋದಿಸಲ್ಪಟ್ಟ ನಂತರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಕಾರ್ಯಾದೇಶ ಪಡೆದು ಸದರಿ ಕಾಮಗಾರಿಯನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಉದ್ಯೋಗ ಚೀಟಿಯನ್ನು ಹೊಂದಿದ ಕೂಲಿ ಕಾರ್ಮಿಕರಿಂದ ಅಕುಶಲ ಕೆಲಸ ಮಾಡಿಸಲಾಗುತ್ತದೆ.

- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡದ ಅಂದಾಜು ವೆಚ್ಚ ರೂ. 16.25 (ರೂ. ಹದಿನಾರು ಲಕ್ಷ ಇಪ್ಪತ್ತೈದು ಸಾವಿರಗಳು ಮಾತ್ರ) ಲಕ್ಷಕ್ಕೆ ಸೀಮಿತಗೊಳಿಸಿದೆ.

**ಅನುಷ್ಟಾನದ ವಿವರ**

- ✓ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ, ಕೇಂದ್ರವನ್ನು ನಿರ್ಮಾಣ ಮಾಡುವುದು.
- ✓ ಪಂ.ಅ.ಅ./ಸಹಾಯಕ ಅಬಿಯಂತರರು ಅಳತೆ ಪುಸ್ತಕದಲ್ಲಿ ಮಾನವ ದಿನಗಳ ಲೆಕ್ಕ ಮಾಡುವುದು.
- ✓ ಕಾರ್ಮಿಕರ ಹಾಜರಾತಿ ಪಟ್ಟಿ(ಎನ್‌ಎಂಆರ್) ಸೃಷ್ಟಿಸುವುದು.
- ✓ ಕೂಲಿ ಪಾವತಿಯನ್ನು ಕಾರ್ಮಿಕರ ಬ್ಯಾಂಕ್ ಖಾತೆಗೆ ಇ–ಎಫ್‌ಎಂಎಸ್ ಮೂಲಕ ಮಾಡಲಾಗುತ್ತದೆ.
- ✓ ಸದರಿ ಕಾಮಗಾರಿಯ ಸಾಮಾಗ್ರಿ ವೆಚ್ಚವನ್ನು ಸಹಾಯಕ ಅಬಿಯಂತರರ ಅಳತೆ ಪುಸ್ತದಲ್ಲಿ ನಮೂದಿಸಿರುವಂತೆ ಗುತ್ತಿಗೆದಾರನಿಗೆ ಪಾವತಿ ಮಾಡಲಾಗುತ್ತದೆ.

✓ ತಾಲ್ಲೂಕು ಕೇಂದ್ರವನ್ನು ನಿರ್ಮಾಣ ಮಾಡಲು ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಅಭಿಯಂತರರ ಅಳತೆ ಪುಸ್ತಕದಲ್ಲಿ ನಮೂದು ಮಾಡಿರುವ ಮಾನವ ದಿನಗಳ ಲೆಕ್ಕ ಮಡುವುದು.

✓ ಕೂಲಿ ಕಾರ್ಮಿಕರ ಹಾಜರಾಟಿ ಪಟ್ಟಿ ಸೃಷ್ಟಿಸಿ ಅದರಂತೆ ಕೂಲಿ ಪಾವತಿಯನ್ನು ಮಾಡುವುದು.

**ಹಣಕಾಸಿನ ಮೂಲ**

- ಬಿಆರ್‌ಜಿಎಫ್ ಜಿಲ್ಲೆಗಳಿಗೆ ಬಿಆರ್‌ಜಿಎಫ್ ಯಿಂದ ಸಾಮಗ್ರಿ ವೆಚ್ಚವನ್ನು ಭರಿಸಲಾಗುತ್ತದೆ
- ಕಾರ್ಮಿಕರ ವೆಚ್ಚವನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಿಂದ ಭರಿಸಲಾಗುತ್ತದೆ.
- ಬಿಆರ್‌ಜಿಎಫ್ ಯಿಂದ ಭರಿಸಲಾದ ಸಾಮಗ್ರಿ ವೆಚ್ಚದಲ್ಲಿ ಕೊರತೆಯಿದ್ದಲ್ಲಿ ಸದರಿ ಮೊತ್ತವನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಿಂದ ಭರಿಸಲಾಗುತ್ತದೆ. ಆದರೆ ಭರಿಸಲಾದ ಸದರಿ ವೆಚ್ಚವು ಶೇ. 40 ರಷ್ಟನ್ನು ಮೀರಬಾರದು.
- ಬಿಆರ್‌ಜಿಎಫ್ ಒಳಪಡದ ಜಿಲ್ಲೆಗಳಿಗೆ ಮಹಾತ್ಮ ಗಾಂಧಿ ನರೇಗಾಯೋಜನೆ ಮೂಲವಾಗಿರುತ್ತದೆ.
- ಒಂದು ವೇಳೆ ಸಾಮಗ್ರಿ ವೆಚ್ಚವು ಶೇ. 40 ರಷ್ಟನ್ನು ಮೀರಿದರೆ, ಇನ್ನಿತರೆ ಯೋಜನೆಗಳಾದ ಆರ್‌ಜಿಎಸ್‌ವೈ ಯಿಂದ ಭರಿಸಬಹುದಾಗಿರುತ್ತದೆ.

**9. ನಮ್ಮೂರ ಕೆರೆ**

ಸಕಲ ಜೀವರಾಶಿಗಳಿಗೂ ಆಧಾರವಾಗಿರುವ 'ಭೂಮಿ' ಸಕಲ ಜೀವಿಗಳ ಅಸ್ತಿತ್ವಕ್ಕೆ ಅತ್ಯಂತ ಅಗತ್ಯವಾದ ಗಾಳಿ ಮತ್ತು ನೀರನ್ನು ಹೊಂದಿದೆ. ಇವುಗಳಲ್ಲಿ ನೀರು ಎಂಬುದು 'ಜೀವನ ಸಂಜೀವಿನಿ' ಇದ್ದಂತೆ, ನೀರಿಲ್ಲದೆ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ನಾವು, ನೀವು ಬದುಕಿರಲು ಸಾಧ್ಯವಿಲ್ಲ. ನೀರಿನಿಂದಲೇ ಜೀವ, ಜೀವಿಗಳ ಜೀವನ. ಸಕಲ ಜೀವರಾಶಿಗಳ ಉಳಿವು – ಅಳಿವಿನ ಪ್ರಶ್ನೆ ನೀರಿನ ಇರುವಿಕೆಯ ಮೇಲೆ ಅವಲಂಬಿಸಿದೆ. ಜಗತ್ತಿನ ಎಲ್ಲಾ ನಾಗರೀಕತೆಗಳು ಬೆಳೆದಿರುವುದು ಜಲ ಮೂಲಗಳ ಸುತ್ತಲೂ ಎಂಬುದು ಐತಿಹಾಸಿಕ ಸತ್ಯ.

ಈ ಜೀವಂತ ಭೂಮಿಗೆ ನೀರಿನ ಏಕೈಕ ಆಕಾಲ ಮಳೆ. ಮಳೆಗಾಲದಲ್ಲಿ ಮಳೆ ನೀರಿನಿಂದ ನದಿ, ಝರಿ, ತೊರೆಗಳು ತುಂಬಿ ಹರಿದು ಸಮುದ್ರ ಸೇರುತ್ತವೆ. ಉಪ್ಪು ನೀರು ಉಪಯೋಗಿಸಲುಬಾರದು. ಅಂತರ್ಜಲ ಖಾಲಿಯಾಗಬಹುದಾದ ಸಂಪನ್ಮೂಲ. ಆದ್ದರಿಂದ

ನಮಗಿರುವ ಒಂದೇ ಒಂದು ದಾರಿ ಎಂದರೆ ಮಳೆಗಾಲದಲ್ಲಿ ದೊರೆಯುವ ಮಳೆ ನೀರನ್ನು ಮುಂದಿನ ಮಳೆಗಾಲದವರೆಗೆ ಬಳಕೆಗೆ ಬರುವಂತೆ ಶೇಖರಿಸಿಟ್ಟುಕೊಳ್ಳುವುದು. ಹೀಗಾಗಿ ಮಾನವನಿಗೆ ಕೆರೆ, ಕಟ್ಟೆ, ಕುಂಟೆ, ಗೋಕಟ್ಟೆ ಮತ್ತು ಕಲ್ಯಾಣಿಗಳೆಂಬ ನೀರು ಶೇಖರಣಾ ರಚನೆಗಳ ಪರಿಕಲ್ಪನೆ ಬಳಕೆಗೆ ಬಂದಿತು.

**ಪ್ರಸ್ತುತದಲ್ಲಿ......**

ರಾಜ್ಯಾದ್ಯಂತ ಸುಮಾರು 37,000 ಕೆರೆಗಳಿದ್ದು, ಈ ಪೈಕಿ ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಸುಮಾರು 33,374 ಕೆರೆಗಳಿವೆ. ಇಡೀ ಪ್ರಾಣಿ ಸಂಕುಲದ ಬೆಳವಣಿಗೆಗೆ ಕೆರೆಗಳು, ಕಟ್ಟೆಗಳು, ಕಲ್ಯಾಣಿಗಳು ತಮ್ಮದೇ ಆದ ಕಾಣಿಕೆಯನ್ನು ನೀಡಿ, ಎಲ್ಲಾ ಕಾಲಘಟಗಳಲ್ಲೂ ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿವೆ. ಆದರೆ ಇಂದು ಕೆರೆಗಳು ಸರಿಯಾದ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆ ತಲುಪಿವೆ. ಬಹಳಷ್ಟು ಕೆರೆಗಳು ಹೂಳಿನಿಂದ ತುಂಬಿವೆ. ಕೆಲವು ಕೆರೆಗಳು ತ್ಯಾಜ್ಯ ವಸ್ತುಗಳ ಸಂಗ್ರಹ ತಾಣಗಳಾಗಿ ಮಲೀನಗೊಂಡಿವೆ. ಜಲಾನಯನ ಪ್ರದೇಶದಲ್ಲಿ ನೀರಿನ ಹರಿಯುವಿಕೆಗೆ ಅಡಚಣೆಗಳುಂಟಾಗಿ ನೀರಿನ ಜಮಾವಣೆ ಕಡಿತಗೊಂಡಿವೆ. ಕಾಲುವೆ ಮತ್ತು ತೂಬುಗಳು ಶಿಥಿಲಗೊಂಡಿರುವುದು ಕೆರೆಯಂಗಳ ಮತ್ತು ಪೋಷಕ ಕಾಲುವೆಗಳ ಒತ್ತುವರಿ ನೀರಿನ ಹರಿಯುವಿಕೆಯನ್ನು ದಿಕ್ಕು ತಪ್ಪಿಸಿ ವಸತಿ ಸಮುಚ್ಚಯಗಳು ನಿರ್ಮಾಣವಾಗಿವೆ. ಪುನಃಶ್ಚೇತನಗೊಂಡ ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳು ಜನ-ಜಾನುವಾರು, ಪಕ್ಷಿ ಸಂಕುಲಗಳ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಇದನ್ನು ಮನಗಂಡು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಪುನಃಶ್ಚೇತನಕ್ಕೆ ಸರ್ಕಾರವು ಕಟಿಬದ್ಧವಾಗಿದೆ. ಸರ್ಕಾರವು ಆದೇಶ ಸಂಖ್ಯೆ ಗ್ರಾಅಪ:186 ಉಖಾಯೋ 2013 ಬೆಂಗಳೂರು, ದಿನಾಂಕ: 14-08-2013 ಹಾಗೂ ಆದೇಶ ಸಂಖ್ಯೆ ಗ್ರಾಅಪ:186 ಉಖಾಯೋ 2013 ಬೆಂಗಳೂರು, ದಿನಾಂಕ 23-08-2013 ಇವುಗಳ ಮುಖಾಂತರ ಆದೇಶ ಹೊರಡಿಸಿದೆ. 'ನಮ್ಮೂರ ಕೆರೆ' ಕಾರ್ಯಕ್ರಮವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಇಲಾಖೆಯಲ್ಲಿ ಹಾಲಿ ಜಾರಿಯಲ್ಲಿರುವ ಇತರೆ ಯೋಜನೆಗಳು ಅನುದಾನದಡಿಯಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಕೆರೆಗಳನ್ನು ಆಯ್ಕೆ ಮಾಡಿಕೊಂಡು ಪುನಃಶ್ಚೇತನಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ಯೋಜನೆಯ ರೂಪು ರೇಷೆ:**

1. ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳ ಜಲಾನಯನ ಪ್ರದೇಶದಲ್ಲಿರುವ ಸರ್ಕಾರಿ, ಗ್ರಾಮ ಪಂಚಾಯತಿ ವ್ಯಾಪ್ತಿಯ ಜಮೀನುಗಳು ಒತ್ತುವರಿಯಾಗಿದ್ದಲ್ಲಿ, ಕಂದಾಯ ಇಲಾಖೆಯ ಸಹಕಾರ ಪಡೆದು ಒತ್ತುವರಿಯನ್ನು ತೆರವುಗೊಳಿಸುವುದು.

2. ಪುನಃಶ್ಚೇತನ ಕಾಮಗಾರಿಗಳನ್ನು ಆರಂಭಿಸುವ ಮೊದಲು ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳ ಜಲಾನಯನ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸುವುದು.

   (ಅ) ಮಳೆ ನೀರು ಹರಿದು ಬರುವ ಜಲಾನಯನ ಪ್ರದೇಶದ ಇಳಿಜಾರಿನಲ್ಲಿ ಅಡ್ಡವಾಗಿ ಬದುಗಳನ್ನು ಹಾಕಿ ನೀರಿನ ವೇಗವನ್ನು ಕಡಿಮೆಗೊಳಿಸುವುದು ಹಾಗೂ ಮಣ್ಣಿನ ಸವಕಳಿಯನ್ನು ತಡೆದು ಭೂಸಾರವನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳುವುದು.

   (ಆ) ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳಿಗೆ ನೀರು ಹರಿದು ಬರುವ ಎಲ್ಲಾ ಕಾಲುವೆಗಳಲ್ಲಿರುವ ತಡೆಗಳನ್ನು ಹಾಗೂ ಹೂಳನ್ನು ತೆಗೆಯುವುದು.

   (ಇ) ಜಲಾನಯನ ಪ್ರದೇಶದಲ್ಲಿ ಅರಣ್ಯೀಕರಣವನ್ನು ಕೈಗೊಳ್ಳುವುದು.

3. ಪುನಃಶ್ಚೇತನಕ್ಕಾಗಿ ಆಯ್ಕೆ ಮಾಡಿದ ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳಿಗೆ ಸಂಬಂಧಿಸಿದಂತಹ ಈ ಕೆಳಗಿನ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲು ಆದ್ಯತಾನುಸಾರ ಕ್ರಮ ಕೈಗೊಳ್ಳುವುದು.

   (ಅ) ತೂಬುಗಳನ್ನು ದುರಸ್ಥಿಪಡಿಸುವುದು.

   (ಆ) ಕೆರೆ ಕೋಡಿಗಳ ಸುಧಾರಣೆ

   (ಇ) ನಾಲಾಬದುಗಳ ಸುಧಾರಣೆ

   (ಈ) ಕೆರೆಗಳ ಏರಿ/ ಕಟ್ಟೆಗಳ ಸುಧಾರಣೆ

   (ಉ) ಅವಶ್ಯವಿರುವಲ್ಲಿ ಕೆರೆ ಹೂಳೆತ್ತುವುದು.

   (ಊ) ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳ ಅಭಿವೃದ್ಧಿಗೆ ಸಂಬಂಧಿಸಿದ ಇತರೆ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳುವುದು.

**10. ಕೊಳವೆ ಬಾವಿ ಮರುಪೂರಣ ಕಾರ್ಯಕ್ರಮ**

ರಾಜ್ಯದಲ್ಲಿ ಬಹಳಷ್ಟು ಕೊಳವೆ ಬಾವಿಗಳು ಬತ್ತಿದ್ದು, ಇವುಗಳನ್ನು ಮರುಪೂರಣ ಮಾಡುವುದು ಅತ್ಯಾವಶ್ಯಕವಾಗಿದೆ. ಈ ದಿಶೆಯಲ್ಲಿ ರಾಜ್ಯದ ಎಲ್ಲಾ ಕೊಳವೆ ಬಾವಿಗಳನ್ನು ಮರುಪೂರಣ ಮಾಡಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕಾರ್ಯಕ್ರಮವೊಂದನ್ನು ರೂಪಿಸಲು ಕ್ರಮವಹಿಸುವುದು.

**11. ಫುಟ್ ಬ್ರಿಡ್ಜ್‌ಗಳ ನಿರ್ಮಾಣ**

ರಾಜ್ಯದಲ್ಲಿ ಕೆಲವೊಂದು ಗ್ರಾಮಗಳು ಅರಣ್ಯ ಪ್ರದೇಶ, ನದಿ, ಹೊಳೆ ದಂಡೆಯಲ್ಲಿರುತ್ತವೆ. ಗ್ರಾಮೀಣ ಜನತೆ ಅನೇಕ ಕಡೆ ಗ್ರಾಮಗಳಿಂದ ಅವರ ದಿನ ನಿತ್ಯದ ಕೆಲಸ ಕಾರ್ಯಗಳಿಗೆ, ಮಕ್ಕಳು ಶಾಲೆಗೆ, ರೈತರು ತಮ್ಮ ಬೆಳೆಗಳನ್ನು ಪೇಟೆಗೆ ಒಯ್ಯಲು ಹೊಳೆ, ನದಿ ಮೂಲಕ ಅಲ್ಪ ದೂರ ಕ್ರಮಿಸಬೇಕಾಗುತ್ತದೆ. ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಿ ಈ ಕಾರ್ಯ ಸ್ಥಗಿತಗೊಳ್ಳುತ್ತದೆ. ಅವರಿಗೆ ಪೇಟೆಯ ಸಂಪರ್ಕ ತಪ್ಪಿ ಹೋಗುತ್ತದೆ. ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗುವುದಿಲ್ಲ. ಈ ಅಡೆತಡೆಗಳನ್ನು ನಿವಾರಿಸಲು ನದಿ, ಹೊಳೆಗಳಿಗೆ ಫುಟ್ ಬ್ರಿಡ್ಜ್‌ಗಳನ್ನು ನಿರ್ಮಿಸುವುದರ ಮೂಲಕ ಅವರ ಜೀವನ ಹಸನಾಗುವಂತೆ ಮಾಡಲು ಕಾರ್ಯಕ್ರಮ ಒಂದನ್ನು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಮತ್ತು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಗಳನ್ನು ಒಗ್ಗೂಡಿಸುವ ಮೂಲಕ ಕಾರ್ಯಕ್ರಮ ರೂಪಿಸಲು ಕ್ರಮ ವಹಿಸುವುದು.

**12. ಉದ್ಯಾನವನ ನಿರ್ಮಾಣ/ಸಸಿ ನೆಡುವಿಕೆ, ಗ್ರಾಮ ಸೌಂದರ್ಯಿಕರಣ**

ಗ್ರಾಮೀಣ ಜನರಿಗೆ ಉತ್ತಮ ಗಾಳಿ, ಮಕ್ಕಳು ಆಟಗಳಲ್ಲಿ ನಲಿದಾಡಲು ಅಗತ್ಯವಾಗಿ ಬೇಕಾದ ಉದ್ಯಾನವನಗಳನ್ನು ನಿರ್ಮಿಸುವುದು ಅಗತ್ಯವಾಗಿದೆ. ಗ್ರಾಮೀಣ ಸರ್ಕಾರಿ ಖಾಲಿ ಜಾಗ, ರಸ್ತೆಗಳು ಅಕ್ಕಪಕ್ಕಗಳಲ್ಲಿ ಸರ್ವಋತು ಮರ ಗಿಡಗಳ ಸಸಿಗಳನ್ನು ನೆಟ್ಟು ಆಕರ್ಷಕವಾದ ನೋಟವನ್ನು ಉಂಟು ಮಾಡುವುದರ ಜೊತೆಗೆ ರಸ್ತೆಯಲ್ಲಿ ಓಡಾಡುವವರಿಗೆ ಆಹ್ಲಾದವನ್ನುಂಟುಮಾಡಲು ಮರಗಿಡಗಳ ನೆರಳನ್ನು ಒದಗಿಸಲು ಹಾಗೂ ಗ್ರಾಮಗಳನ್ನು ಸೌಂದರ್ಯೀಕರಣಗೊಳಿಸಲು ಕಾರ್ಯಕ್ರಮವೊಂದನ್ನು ರೂಪಿಸಲು ಕ್ರಮವಹಿಸುವುದು.

**13. ಗ್ರಾಮೀಣ ಗೋದಾಮುಗಳ ನಿರ್ಮಾಣ**

ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಬೆಲೆ ಬರುವಂತೆ ಮಾಡುವುದು ಅಗತ್ಯವಾಗಿದೆ. ಬೆಳೆದ ಫಸಲನ್ನು ಉತ್ತಮ ಬೆಲೆ ಬರುವವರೆಗೆ ಕಾಯ್ದಿಟ್ಟುಕೊಳ್ಳಲು ಬಹು ಗೋದಾಮುಗಳ

ಅಗತ್ಯವಿದೆ. ಎಲ್ಲಾ ರೈತರೂ ಗೋದಾಮುಗಳನ್ನು ನಿರ್ಮಿಸಲು ಶಕ್ತರಿರುವುದಿಲ್ಲ. ಇಂತಹವರಿಗೆ ಗೋದಾಮುಗಳನ್ನು ನಿರ್ಮಿಸಿಕೊಡುವುದರಿಂದ ಅವರುಗಳ ಸಬಲೀಕರಣಕ್ಕೆ ನಾಂದಿ ಹಾಡಿದಂತಾಗುತ್ತದೆ. ಈ ಹಿನ್ನಲೆಯಲ್ಲಿ ಗ್ರಾಮೀಣ ಗೋದಾಮುಗಳನ್ನು ನಿರ್ಮಿಸುವ ಕಾರ್ಯಕ್ರಮವೊಂದನ್ನು ರೂಪಿಸಲು ಕ್ರಮವಹಿಸುವುದು.

ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ 21 ಅಂಶಗಳ ಕಾರ್ಯಕ್ರಮದಲ್ಲಿ 13 ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಅನುಸೂಚಿ 1ರಲ್ಲಿ ಅವಕಾಶ ಕಲ್ಪಿಸಿರುವ ನಾಲ್ಕು ಪ್ರವರ್ಗಗಳಲ್ಲಿ ಕೈಗೆತ್ತಿಕೊಳ್ಳಬಹುದಾಗಿರುತ್ತದೆ. ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕಾದರೆ ಮಹಾತ್ಮ ಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಸ್ಪಷ್ಟಪಡಿಸಿರುವ ಮಾರ್ಗಸೂಚಿಗಳು, ನಿಯಮಗಳು ಮತ್ತು ಕಡ್ಡಾಯವಾಗಿ ಪಾಲಿಸಬೇಕಾದ ಅಂಶಗಳನ್ನು ಅನುಸರಿಸಬೇಕಾಗುತ್ತದೆ.

**ಯೋಜನೆಯ ಅನುಷ್ಠಾನ**

- ಗ್ರಾಮಸಭೆಗಳಲ್ಲಿ ಕಾಮಗಾರಿಗಳನ್ನು ಅನುಮೋದಿಸಿ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಳ್ಳುವುದು
- ಅನುಮೋದಿತ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ನಿಯಾಮಾನುಸಾರ ಮಂಜೂರಾತಿ ಪಡೆಯುವುದು
- ಫಲಾನುಭವಿಗಳ ಆಯ್ಕೆಯು ಕಡ್ಡಾಯವಾಗಿ ಗ್ರಾಮಸಭೆಯಲ್ಲಿ ಮಾಡಬೇಕು
- ಸಂಧರ್ಭಾನುಸಾರ ಇವುಗಳನ್ನು ಹೆಚ್ಚುವರಿ ಆಯವ್ಯಯವೆಂದು ಪರಿಗಣಿಸತಕ್ಕದ್ದು
- ನಿಯಮಾನುಸಾರ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪಡೆಯುವುದು
- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯಿಂದ ಅನುಮೋದಿಸಿದ ಮಾದರಿ ಅಂದಾಜು ಪಟ್ಟಿಯ ಅನ್ವಯ ಕೆಲಸ ನಿರ್ವಹಿಸುವುದು
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೂಲಿ ಸಾಮಾಗ್ರಿಗಳ ಅನುಪಾತ 60:40 ಇರತಕ್ಕದ್ದು
- ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ 2013ರ 4ನೇ ಆವೃತ್ತಿಯ ಕಾರ್ಯವಿಧಾನಗಳನ್ನು ಕಡ್ಡಾಯವಾಗಿ ಅನುಸರಿಸುವುದು ಮತ್ತು ಅಧ್ಯಾಯ 7 ರ ಕಂಡಿಕೆ 7.3 ರಲ್ಲಿ ನಿಷಿದ್ಧವೆಂದು ಘೋಷಿಸಿರುವ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ

- ಕಾಮಗಾರಿಗಳ ಅನುಷ್ಠಾನಕ್ಕೆ ಕೂಲಿಗಾರರ ಬೇಡಿಕೆ ಇರುವುದನ್ನು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸುವುದು
- ಕಾಮಗಾರಿಗಳಲ್ಲಿ ಅಕುಶಲ ಕೆಲಸವನ್ನು ಉದ್ಯೋಗಚೀಟಿ ಹೊಂದಿರುವವರ ಮಾತ್ರ ನಿರ್ವಹಿಸತಕ್ಕದ್ದು
- ಗುತ್ತಿಗೆದಾರರ ಮತ್ತು ಯಂತ್ರ ಬಳಕೆಯನ್ನು ಕಡ್ಡಾಯವಾಗಿ ನಿಷೇದಿಸಿದೆ
- ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ದಿ ಅಧಿಕಾರಿ, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಅನುಷ್ಠಾನದ ವ್ಯಾಪ್ತಿಗೆ ಬರುವ ಅಧಿಕಾರಿಗಳಾಗಿರುತ್ತಾರೆ

**ಹಣಕಾಸಿನ ನೆರವು**

- ಮಹಾತ್ಮಾ ಗಾಂಧಿ ಎನ್ಆರ್ಇಜಿ ಯೋಜನೆಯ ನಿಧಿಯಿಂದ ಭರಿಸುವುದು ಹಾಗು ಒಗ್ಗೂಡಿಸುವಿಕೆಯಡಿ ಕೈಗೊಂಡ ಕಾಮಗಾರಿಗಳಿಗೆ ಅದೇ ಯೋಜನೆಯಡಿ ಭಾಗಶ: ಹಣ ಸಂದಾಯ ಮಾಡುವುದು
- ಇತರೆ ಯೋಜನೆಗಳ ಅನುದಾನ ಹಾಗೂ ಸಕ್ಕರೆ ಕಾರ್ಖಾನೆ, ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಇತರೆ ಸಾಂಸ್ಥಿಕ ಅನುದಾನ ಶಾಸಕರ ಮತ್ತು ಸಂಸದರ ಅನುದಾನಗಳನ್ನು ಈ ಯೋಜನೆಯಡಿ ಒಗ್ಗೂಡಿಸುವುದು
- ವೆಚ್ಚಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು

**ಪಾರದರ್ಶಕತೆ:**

'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ' ಯೋಜನೆ ಹಾಗೂ ಇತರೆ ಯೋಜನೆಯಡಿಯಲ್ಲಿ ಕೈಗೊಳ್ಳುವ ಕೆರೆ, ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳನ್ನು ಪುನಃಶ್ಚೇತನಗೊಳಿಸುವ ಕಾರ್ಯಕ್ರಮದ ಎಲ್ಲಾ ವಿವರಗಳು ಜನಸಾಮಾನ್ಯರಿಗೆ ದೊರೆಯುವಂತೆ ಮಾಡುವುದು ತುಂಬಾ ಅವಶ್ಯವಿದೆ. ಅದಕ್ಕಾಗಿ ಪುನಶ್ಚೇತನ ಕಾರ್ಯಕ್ರಮದ ವಿವರಗಳನ್ನೊಳಗೊಂಡ ಮಾಹಿತಿಯನ್ನು ಈ ಕೆಳಗಿನಂತೆ ದೊರೆಯುವಂತೆ ಮಾಡುವುದು.

- ಗೋಡೆ ಬರಹಗಳನ್ನು ಬರೆಸುವುದು, ಭಿತ್ತಿಪತ್ರ, ಹೋರ್ಡಿಂಗ್ಸ್‌ಗಳನ್ನು ಆಯ್ದ ಪ್ರಮುಖ ಸ್ಥಳಗಳಲ್ಲಿ ಹಾಕುವುದು, ಕರಪತ್ರಗಳನ್ನು ಮುದ್ರಿಸಿ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ವಿತರಿಸುವುದು
- ಬೀದಿ ನಾಟಕಗಳನ್ನು ಏರ್ಪಡಿಸುವ ಮೂಲಕ ಜನರಿಗೆ ಅರಿವು ಮತ್ತು ಯೋಜನೆಯ ಮಹತ್ವವನ್ನು ತಿಳಿಸುವುದು
- ರೇಡಿಯೋ – ಟಿ.ವಿ. ಚಾನಲ್‌ಗಳಲ್ಲಿ ಸಚಿವರ, ಅಧಿಕಾರಿಗಳ ಸಂದರ್ಶನ ಮತ್ತು ಶ್ರೀಸಾಮಾನ್ಯರು ಯೋಜನೆಯ ಕುರಿತು ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಂವಾದ ಮಾಡಲು ಫೋನ್ ಇನ್ ಕಾರ್ಯಕ್ರಮವನ್ನು ಏರ್ಪಡಿಸುವುದು
- ಪುನಃಶ್ಚೇತನಗೊಳಿಸಿದ ಕೆರೆಯ ಮುಂಭಾಗದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಕೆಲಸ ಆರಂಭಿಸಿದ ದಿನ, ನಿಗದಿಪಡಿಸಿದ ವೆಚ್ಚ, ಕೆಲಸಗಾರರ ಮಾಹಿತಿ ಮೊದಲಾದ ಮಾಹಿತಿಯನ್ನು ಪ್ರಕಟಿಸುವುದು
- ಪುನಃಶ್ಚೇತನ ಕಾಮಗಾರಿಯ ಆರಂಭಕ್ಕೆ ಮುನ್ನ ಇದ್ದಂತಹ, ಕೆಲಸ ನಿರ್ವಹಿಸುವಾಗ ಮತ್ತು ಕೆಲಸ ಮುಕ್ತಾಯವಾದ ನಂತರದ ಫೋಟೋಗಳನ್ನು ಕಡ್ಡಾಯವಾಗಿ ವರದಿ ಸಮೇತ ಎನ್.ಆರ್.ಇ.ಜಿ.ಎ. ಮತ್ತು ವರ್ಕ್‌ಸಾಫ್ಟ್ ವೆಬ್‌ಸೈಟ್‌ನಲ್ಲಿ ಅಳವಡಿಸುವುದು
- ಅನುಷ್ಠಾನಗೊಳ್ಳುವ ಎಲ್ಲಾ ಕಾರ್ಯಕ್ರಮಗಳು ಸಾಮಾಜಿಕ ಪರಿಶೋಧನಾ ಪ್ರಕ್ರಿಯೆಗೆ ಕಡ್ಡಾಯವಾಗಿ ಒಳಪಡಬೇಕು

## 14. ಮನೆಗೊಂದು ಶೌಚಾಲಯ

ಜನರು ತಮ್ಮ ಪ್ರಾಣಕ್ಕಿಂತಲೂ ಮಾನಕ್ಕೆ ಹೆಚ್ಚು ಅಂಜುತ್ತಾರೆ. ಶೌಚಾಲಯವನ್ನು ಕಟ್ಟಿಕೊಳ್ಳಲು ಹಿಂಜರಿಯುತ್ತಾರೆ. ನಮ್ಮ ಹೊಲಗಳಲ್ಲಿ ನಾವು ಹೋಗಬೇಕು ಎಂಬ ನಂಬಿಕೆ ಜನರಲ್ಲಿದೆ. ಸರಿಯಾದ ನೀರಿನ ವ್ಯವಸ್ಥೆ ಇಲ್ಲದಿರುವುದು. ವೈಯಕ್ತಿಕ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಕಾಳಜಿವಹಿಸದಿರುವುದು ಗ್ರಾಮೀಣ ಪ್ರದೇಶದ ವೃದ್ಧರು, ಮಹಿಳೆಯರ ಸಮಸ್ಯೆಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆ ಜಾರಿಗೆ ತಂದಿದೆ. 1999ರಲ್ಲಿ "ಸಂಪೂರ್ಣ ಸ್ವಚ್ಛತಾ ಆಂದೋಲನ" 2012ರಲ್ಲಿ 'ನಿರ್ಮಲ್ ಭಾರತ್ ಅಭಿಯಾನ" ಯೋಜನೆಯನ್ನು ಜಾರಿಗೆ ತಂದಿದೆ. 2ನೇ ಅಕ್ಟೋಬರ್, 2014 ರಿಂದ "ಸ್ವಚ್ಛ ಭಾರತ ಆಭಿಯಾನ" ಯೋಜನೆಯಾಗಿ ಪುನರ್ ರಚಿಸಲಾಗಿದೆ.

**ಪ್ರಸ್ಥುತ ವಸ್ತುಸ್ಥಿತಿ**

- ❖ ಬಯಲು ಮಲ ವಿಸರ್ಜನೆ ಕಾಯಿಲೆಗಳು ಹರಡುತ್ತವೆ
- ❖ ಮಹಿಳೆ ಮತ್ತು ಮಕ್ಕಳಿಗೆ ಅನಾರೋಗ್ಯ ಸಾವಿಗೆ ಕಾರಣವಾಗುತ್ತದೆ.
- ❖ ಅಂದಾಜಿನ ಪ್ರಕಾರ ಭಾರತದಲ್ಲಿ ಪ್ರತಿ 10 ಸಾವಿಗೆ ಒಬ್ಬರು ಅನಾರೋಗ್ಯದ ಅಭ್ಯಾಸದಿಂದ ಸಾವಾಗುತ್ತದೆ.
- ❖ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ 20 ಮಕ್ಕಳಲ್ಲಿ ಒಂದು ಸಾವು ಅತಿಸಾರದಿಂದ ಆಗುತ್ತದೆ.
- ❖ UNICEEF:WHO ರ ಪ್ರಕಾರ 2010 ರ ಅಂದಾಜಿನಂತೆ ಪ್ರಪಂಚದ ಶೇ. 58 ರಷ್ಟು ಬಯಲು ಮಲ ವಿಸರ್ಜನೆ ಭಾರತದಲ್ಲಿ ಕಂಡು ಬರುತ್ತದೆ.
- ❖ ಸುಮಾರು ಶೇ. 60 ರಷ್ಟು ಬಯಲು ಮಲ ವಿಸರ್ಜನೆ ರೂಢಿಗತವಾಗಿದೆ.

**ಯೋಜನೆಯ ವಿವರ**

- ➢ ಸ್ವಚ್ಚ ಭಾರತ ಅಭಿಯಾನದಡಿ ವೈಯಕ್ತಿಕ ಶೌಚಾಲಯ, ಅಂಗನವಾಡಿ ಮತ್ತು ಶಾಲೆಗಳ ಶೌಚಾಲಯ ನಿರ್ಮಾಣಕ್ಕೆ ಹಾಗೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕಾಮಗಾರಿಗಳ ಒಗ್ಗೂಡಿಸುವಿಕೆಯ ಮೂಲಕ ಮಹಾತ್ಮಾಗಾಂಧಿ ಎನ್‌ಆರ್‌ಇಜಿ ಯೋಜನೆಯಡಿ ಮಾಡಬಹುದು.
- ➢ ವೈಯಕ್ತಿಕ ಶೌಚಾಲಯಕ್ಕೆ ಗರಿಷ್ಟ ರೂ. 12,000/- ಗಳನ್ನು ಯೋಜನೆಯಡಿ ಭರಿಸಲು ಅವಕಾಶವಿರುತ್ತದೆ.
- ➢ ಸ್ವಂತ ಜಾಗವನ್ನು ಹೊಂದಿರಬೇಕು. ಸರ್ಕಾರ ನಿವೇಶನ ನೀಡುವುದಿಲ್ಲ.
- ➢ ಮಹಾತ್ಮಾ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳನ್ನು ಟಿ.ಎಸ್.ಸಿ ಯೋಜನೆಯಡಿ ನಿರ್ಮಿಸದಿದ್ದಲ್ಲಿ ಅವುಗಳನ್ನು ಎಸ್‌ಬಿಎ ಯೋಜನೆಯಡಿ ನಿರ್ಮಿಸಬಹುದಾಗಿರುತ್ತದೆ. ಶಾಲಾ ಶೌಚಾಲಯಗಳನ್ನು ನಿರ್ಮಾಣ ಮಾಡಲು ರೂ. 35000/- ಮತ್ತು ಅಂಗನವಾಡಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ರೂ. 8000/- ಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗುತ್ತದೆ. ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ನಿರ್ವಹಣೆ ಕಾಮಗಾರಿಗಳನ್ನು ಸಹ ಕೈಗೊಳ್ಳಬಹುದಾಗಿರುತ್ತದೆ.

**ಯೋಜನೆಯ ಗುರಿ**

- ವೈಯಕ್ತಿಕ ನೈರ್ಮಲ್ಯ/ಶುಚಿತ್ವ ಕಾಪಾಡುವುದು
- ಗ್ರಾಮೀಣ ಸಮುದಾಯಕ್ಕೆ ನೈರ್ಮಲ್ಯದ ಮಹತ್ವ ಕುರಿತು ಜಾಗೃತಿ ಮೂಡಿಸುವುದು
- ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ನಿಯಂತ್ರಣಗೊಳಿಸುವುದು
- ಎಲ್ಲಾ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಸುವಂತೆ ಪ್ರೇರೇಪಿಸುವುದು ಹಾಗೂ ಬಯಲ ಮಲವಿಸರ್ಜನೆ ಮುಕ್ತ ಮಾಡುವುದು
- ಅಂಗನವಾಡಿ ಶೌಚಾಲಯ ನಿರ್ಮಾಣ ಮುಖಾಂತರ ಮಗುವಿನ  ಮನಸ್ಸಿನಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ರೂಡಿಸುವುದು
- ಶಾಲಾ ಶೌಚಾಲಯ ನಿರ್ಮಾಣ ಮುಖಾಂತರ ಮಕ್ಕಳ ವೈಯಕ್ತಿಕ ನೈರ್ಮಲ್ಯದ ಕಡೆ ಗಮನ ಹರಿಸುವುದು
- ಹೆಣ್ಣು ಮಕ್ಕಳಿಗೆ ಪೂರಕ ನೈರ್ಮಲ್ಯದ ವ್ಯವಸ್ಥೆ ಕಲ್ಪಿಸುವುದು
- ಅಂಗವಿಕಲ/ ಹಿರಿಯ ನಾಗರೀಕರ ಅನುಕೂಲಕ್ಕಾಗಿ ಅವರಿಗನುಗುಣವಾಗಿ ಶೌಚಾಲಯ ನಿರ್ಮಿಸುವುದು
- ಅನಿವಾರ್ಯ ಪರಿಸ್ಥಿತಿಯಲ್ಲಿ, ಕುಟುಂಬಗಳಿಗೆ ವೈಯಕ್ತಿಕ  ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಜಾಗದ ಸಮಸ್ಯೆ ಇದ್ದಾಗ ಮಾತ್ರ ಸಮುದಾಯ ಶೌಚಾಲಯ ನಿರ್ಮಾಣ ಮಾಡುವ ಮುಖಾಂತರ ಬಯಲು ಬಹಿರ್ದೆಸೆ ಮುಕ್ತಗೊಳಿಸುವುದು.

**ಯೋಜನೆಯ ಅನುಷ್ಠಾನ**

- ಸ್ವಚ್ಛ ಭಾರತ ಅಭಿಯಾನದಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಲು ಹಣ ಪಡೆಯದೆ ಇರುವ ಎಸ್.ಸಿ./ಎಸ್.ಟಿ./ಮಹಿಳಾ ಪ್ರಧಾನ ಕುಟುಂಬ/ವಿಕಲ ಕುಟುಂಬ, ಸಣ್ಣ ಮತ್ತು ಅತೀ ಸಣ್ಣ ರೈತರು, ಬಿಪಿಎಲ್ ಕುಟುಂಬ/ಇಂದಿರಾ ಅವಾಸ್ ಫಲಾನುಭವಿಗಳು ಅರ್ಹರಾಗಿರುತ್ತಾರೆ.
- ಸ್ವಚ್ಛ ಭಾರತ ಅಭಿಯಾನದ ಬೇಸ್ ಲೈನ್ ಸರ್ವೇ ಆಧಾರಿತ ಪಟ್ಟಿಯನ್ವಯ ಆಭಿಯಾನ ಯೋಜನೆಯ ಘಟಕದಿಂದ ಶೌಚಾಲಯ ನಿರ್ಮಿಸಲು ಅರ್ಹತೆ ಬಗ್ಗೆ ಮಾಹಿತಿ ಪಡೆದು ಪ್ರಸಕ್ತ ಸಾಲಿನಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದಿರಬೇಕು.

- ಮಹಾತ್ಮಾ ಗಾಂಧಿ ಎನ್‌ಆರ್‌ಇಜಿ ಯೋಜನೆಯ ಪ್ರಗತಿಯ ವಿವರಗಳನ್ನು ಎಂ.ಐ.ಎಸ್. ನಲ್ಲಿ ಕಡ್ಡಾಯವಾಗಿ ಅವಳಡಿಸಬೇಕು. ಯೋಜನೆ ಲೆಕ್ಕಪತ್ರ ಮತ್ತು ಸಾಮಾಜಿಕ ಪರಿಶೋಧನೆಗೆ ಒಳಪಟ್ಟಿರುತ್ತದೆ.

**ಸಾರ್ವಜನಿಕರು ಮತ್ತು ಗ್ರಾಮ ಪಂಚಾಯಿತಿಯ ಪಾತ್ರ**

- ಸ್ವಚ್ಛ ಭಾರತ್ ಅಭಿಯಾನದ ಅನುಷ್ಠಾನವು ಸಮೂದಾಯ ಆಧಾರಿತವಾಗಿದ್ದು, ಸಮೂದಾಯವೇ ಇಲ್ಲಿ ಫಲಾನುಭವಿಯಾಗಿರುವುದರಿಂದ ಸಮೂದಾಯವು ಸ್ವಪ್ರೇರಣೆಯಿಂದ ಸೌಲಭ್ಯವನ್ನು ಪಡೆದು ನಿರ್ವಹಣೆ ಮಾಡಿಕೊಳ್ಳಬೇಕು.
- ರಾಜ್ಯವನ್ನು ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವನ್ನಾಗಿ ಮಾಡಲು ಸಮೂದಾಯದ ಪಾತ್ರವೇ ಪ್ರಧಾನವಾದದ್ದು.
- ಗ್ರಾಮ ಪಂಚಾಯಿತಿಗಳು ಮತ್ತು ಸಮುದಾಯ ಒಟ್ಟಾಗಿ ಅನುಷ್ಠಾನ ಕ್ರಿಯಾ ಯೋಜನೆ ತಯಾರಿಸಬೇಕು. ಗ್ರಾಮ ಪಂಚಾಯತ್‌ಗಳು ಸಮೂದಾಯಕ್ಕೆ ಸೂಕ್ತ ಮಾರ್ಗದರ್ಶನ ಮಾಡಬೇಕು
- ಅನುಷ್ಠಾನ ಮತ್ತು ಅನುಷ್ಠಾನೋತ್ತರ ಹಂತದ ಎಲ್ಲಾ ಜವಾಬ್ದಾರಿಗಳು ಗ್ರಾಮ ಪಂಚಾಯತಿಯದೇ ಆಗಿರುತ್ತದೆ.

**ಸಾರ್ವಜನಿಕ ಶೌಚಾಲಯ**

- ಸ್ಥಳ ನಿಗದಿ ಮಾಡುವುದು ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಲು ಸ್ಥಳಾವಕಾಶದ ಕೊರತೆ ಇರುವ ಕಡೆ ಮಾತ್ರ ಸಮುದಾಯ ಶೌಚಾಲಯ ನಿರ್ಮಿಸುವುದು
- ನೀರು ಲಭ್ಯತೆಯನ್ನು ಖಚಿತ ಪಡಿಸಿಕೊಂದು ಶೌಚಾಲಯ ನಿರ್ಮಾಣ ಮಾಡುವುದು
- ಸಮುದಾಯ ಶೌಚಾಲಯದ ನಿರ್ವಹಣೆಯ ಜವಾಬ್ದಾರಿ ಸಮುದಾಯ ಮತ್ತು ಗ್ರಾಮ ಪಂಚಾಯಿತಿಯದ್ದಾಗಿರುತ್ತದೆ.
- ಮಹಿಳಾ ಸಮುದಾಯ ಶೌಚಾಲಯದಲ್ಲಿ ಕಡ್ಡಾಯವಾಗಿ ಸ್ನಾನ/ಬಚ್ಚಲು ಹಾಗೂ ಬಟ್ಟೆ ಒಗೆಯುವ ವ್ಯವಸ್ಥೆ ನಿರ್ಮಿಸುವುದು

**ಮಾಡಬೇಕಾದದ್ದು**

- ಗ್ರಾಮೀಣ ಪ್ರದೇಶಗಳಲ್ಲಿ ವಯಸ್ಸಾದವರು, ಅಪಘಾತಕ್ಕೊಳಗಾದವರು, ಅಂಗವಿಕಲರು ಮುಂತಾದ ವ್ಯಕ್ತಿಗಳಿಗೆ ಅನುಕೂಲವಾಗುವಂತೆ ಪಾಶ್ಚಿಮಾತ್ಯ ರೀತಿಯ ಕಮೋಡ್‌ಗಳನ್ನು ಅಳವಡಿಸಿ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದು

- ಗ್ರಾಮೀಣ ಪ್ರದೇಶಗಳಲ್ಲಿ ಸುಲಭ, ಸರಳ ಮತ್ತು ಹೊಸ ತಂತ್ರಗಳನ್ನು ಬಳಸಿ ಶೌಚಾಲಯ ನಿರ್ಮಾಣ ಮಾಡುವುದು ಹಾಗೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ತಂತ್ರಜ್ಞಾನ ಬಳಕೆಯಲ್ಲಿ ಗ್ರಾಮೀಣ ಪ್ರದೇಶದ ಯುವಕರಿಗೆ ತಾಂತ್ರಿಕವಾಗಿ ತರಬೇತಿ ನೀಡಿ ಸ್ಥಳೀಯ ನಿರ್ವಹಣೆಯ ಮುಖಾಂತರ ನಿರಂತರತೆಯನ್ನು ಕಾಯ್ದುಕೊಳ್ಳುವುದು
- ಹಂತ ಹಂತವಾಗಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಕೂಡ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ ಕ್ರಮ ಕೈಗೊಳ್ಳುವುದು
- ಪ್ರತಿ ಕುಟುಂಬಕ್ಕೊಂದು ಬಚ್ಚಲು ಮನೆ ನಿರ್ಮಿಸಿ ಆರೋಗ್ಯವಂತ ಸಮಾಜ ರೂಪಿಸುವುದು
- ಹಂತ ಹಂತವಾಗಿ ಹೆಣ್ಣು ಮಕ್ಕಳ ಪ್ರೌಢಶಾಲೆಗಳಲ್ಲಿ ಸ್ರಾವದ ಬಟ್ಟೆಗಳನ್ನು (ಸ್ಯಾನಿಟರಿ ಪ್ಯಾಡ್‌ಗಳನ್ನು) ಸುಡುವ ಉಪಕರಣಗಳನ್ನು (ಇನ್ಸಿನಿರೇಟರ್) ಅಳವಡಿಸುವುದು, ಮುಂತಾದವುಗಳು ಒರಿಸ್ಸಾ/ಇಂಡಿಯನ್/ಯೂರೋಪಿಯನ್ ಮಾದರಿಯ ಶೌಚಾಲಯಗಳನ್ನು ನಿರ್ಮಿಸುವುದು

**15. ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ**

ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರೂಪಿಸಿದ್ದ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಆಜೀವಿಕಾ) ಎಂದು ಪುನರ್ ರಚನೆ ಮಾಡಲಾಗಿದೆ. ಬಡತನದ ಮಟ್ಟವನ್ನು ಕಡಿಮೆ ಮಾಡಿ ಗ್ರಾಮ ಪಂಚಾಯತಿ ಹಂತದಲ್ಲಿ ಸಾಂಸ್ಥಿಕ ವೇದಿಕೆಗಳನ್ನು ಸೃಜಿಸುವುದಾಗಿದೆ. ಕರ್ನಾಟಕದಲ್ಲಿ "ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ" (ಕೆಎಸ್‌ಆರ್‌ಎಲ್‌ಪಿಎಸ್) ಎಂಬ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ

**ಸ್ವ ಸಹಾಯ ಸಂಘಗಳ ಪ್ರಸ್ತುತ ಪರಿಸ್ಥಿತಿ**

- ಬಡತನದ ಸಂಕಷ್ಟದಿಂದ ಹೊರಬರಲು ಸಂಘಟನೆಯಿಂದ ಸಾಧ್ಯವಿದೆ ಎಂಬ ನಂಬಿಕೆಯಿಂದ ಭಾಗಿಗಳಾಗಿರುತ್ತಾರೆ
- ಆಂತರಿಕ ಉಳಿತಾಯ, ಸಾಲ ಮತ್ತು ಸುತ್ತುನಿಧಿಗೆ ಸೀಮಿತರಾಗಿರುತ್ತಾರೆ
- ಹೊಸ ಆದಾಯೋತ್ಪನ್ನ ಚಟುವಟಿಕೆಗಳ ಸಾಧ್ಯತೆಗಳ ಕುರಿತು ಮಾಹಿತಿ ಹಾಗೂ ತರಬೇತಿಯ ಕೊರತೆಯಿರುತ್ತದೆ
- ಸಕಾಲದಲ್ಲಿ ಆರ್ಥಿಕ ಸಾಲ ಸೌಲಭ್ಯವು ಪೂರ್ಣ ಪ್ರಮಾಣದಲ್ಲಿ ದೊರಕುತ್ತಿಲ್ಲ
- ಮಾರುಕಟ್ಟೆ ಬೆಂಬಲ, ಮಾರ್ಗದರ್ಶನ ಮತ್ತು ಸೂಕ್ತ ಅನುಸರಣಾ ವ್ಯವಸ್ಥೆಯ ಕೊರತೆಯಿದೆ

**ಅಭಿಯಾನದ ಧ್ಯೇಯ/ಗುರಿ**

"ಲಾಭಯುತ ಆದಾಯವನ್ನು ಒದಗಿಸುವುದರ ಮೂಲಕ ಬಡತನದ ಪ್ರಮಾಣವನ್ನು ಕಡಿಮೆಗೊಳಿಸುವುದು ಮತ್ತು ಸಮುದಾಯ ಸಂಸ್ಥೆಗಳ ಮೂಲಕ ಸ್ವ-ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದರಿಂದಾಗಿ ಗ್ರಾಮೀಣ ಜನರ ಜೀವನಮಟ್ಟದಲ್ಲಿ ಸಮರ್ಥನೀಯವಾದ ಅಭಿವೃದ್ಧಿಯನ್ನು ಕಾಣುವುದು"

**ಯೋಜನೆಯ ವಿವರ**

- ಫಲಾನುಭವಿಗಳು – ಬಿಪಿಎಲ್ ಕುಟುಂಬದ ಮಹಿಳಾ ಸ್ವ ಸಹಾಯ ಗುಂಪಿನ ಸದಸ್ಯರು ಪಂಚ ಸೂತ್ರಗಳ ಅನುಸರಣೆ – ನಿರಂತರ ಸಭೆ, ಉಳಿತಾಯ, ಆಂತರಿಕ ಸಾಲ, ಮರುಪಾವತಿ ಮತ್ತು ಲೆಕ್ಕಪತ್ರ ನಿರ್ವಹಣೆ
- ಅಸಂಘಟಿತ ಮಹಿಳೆಯರನ್ನು ಸಂಘಟಿಸಿ ಹೊಸ ಗುಂಪುಗಳ ರಚನೆ
- ವಿವಿಧ ಹಂತಗಳಲ್ಲಿ ಒಕ್ಕೂಟಗಳ ನಿರ್ಮಾಣ
- ಆರ್ಥಿಕ ಸೇರ್ಪಡೆ
- ಸ್ವ ಸಹಾಯ ಗುಂಪಿನ ಮಹಿಳೆಯನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೆ ವೃತ್ತಿ ಕೌಶಲ್ಯ ನೀಡಿ ಉದ್ಯೋಗ ಕಲ್ಪಿಸುವುದು

**ಯೋಜನೆಯ ಕಾರ್ಯತಂತ್ರ**

ಯೋಜನೆಯನ್ನು ತೀವ್ರ ಕಾರ್ಯಾಚರಣೆ ತಾಲ್ಲೂಕುಗಳು ಎಂದು ರಾಜ್ಯದ 5 ಜಿಲ್ಲೆಯ ಉತ್ತರ ಕನ್ನಡ (ಅಂಕೋಲ, ಜೋಯಿಡಾ, ಕುಮಟಾ, ಯಲ್ಲಾಪುರ), ಗದಗ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), ಕೊಪ್ಪಳ (ಕುಷ್ಟಗಿ, ಕೊಪ್ಪಳ, ಯಲಬುರ್ಗಾ), ಮೈಸೂರು (ಹೆಚ್.ಡಿ.ಕೋಟೆ, ನಂಜನಗೂಡು, ಹುಣಸೂರು, ಟಿ ನರಸೀಪುರ) ಮತ್ತು ತುಮಕೂರು (ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ) 20 ತಾಲ್ಲೂಕುಗಳಲ್ಲಿ ಅನುಷ್ಠಾನ ಮಾಡಲಾಯಿತು.

16. **ರಾಜೀವ್ ಗಾಂಧಿ ಚೈತನ್ಯ ಯೋಜನೆ (ಆರ್‌ಜಿಸಿವೈ)**

ಆರ್‌ಜಿಸಿವೈ ಬದಲಿ ಆದಾಯ ವ್ಯವಸ್ಥೆ ಕಲ್ಪಿಸುವುದರ ಮೂಲಕ ಯುವಜನರಲ್ಲಿ ಅಡಗಿರುವ ಪ್ರತಿಭಾ ಕೌಶಲ್ಯವನ್ನು ಗುರುತಿಸುವುದು. ಯುವಜನರು ವಿವಿಧ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಗ್ರಾಮದ ಆಸ್ತಿಯಾಗಿ ಪರಿವರ್ತಿಸುವುದು. ಯೋಜನೆಯು ನಿರುದ್ಯೋಗಿ ಯುವಜನರಲ್ಲಿ ಆತ್ಮವಿಶ್ವಾಸ, ಅಂತಃಶಕ್ತಿಯನ್ನು ವೃದ್ಧಿಪಡಿಸಿ ಲಾಭದಾಯಕ ಉದ್ಯಮಕ್ಕೆ ಸಹಾಯ ನೀಡುವುದು ಹಾಗೂ ಜೀವನದ ಗುಣಮಟ್ಟವನ್ನು ಸುಧಾರಿಸುವುದು.

**ಆರ್‌ಜಿಸಿವೈ ಉದ್ದೇಶಗಳು**

- ಗ್ರಾಮೀಣ ಯುವಜನರಿಗೆ ಲಾಭದಾಯಕ ಸ್ವ ಉದ್ಯೋಗದ ಅವಕಾಶ ಕಲ್ಪಿಸುವುದು
- ಯುವಕ ಯುವತಿಯರಿಗೆ ವೃತ್ತಿ ಕೌಶಲ್ಯ ತರಬೇತಿಗಳನ್ನು ನೀಡುವುದು
- ಖಾಸಗಿ ವಲಯಗಳಲ್ಲಿ ರಕ್ಷಣಾ ಕಾರ್ಯಗಳ ಉದ್ಯೋಗ ಪಡೆಯುವಂತೆ ಕೌಶಲ್ಯ ನೀಡುವುದು
- ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದು
- ನಿರುದ್ಯೋಗಿ ಯುವಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಕಾರ್ಯಕ್ರಮಗಳೊಂದಿಗೆ ಸಂಪರ್ಕ ಕಲ್ಪಿಸುವುದು

**ಯೋಜನೆಯ ಮಾನದಂಡ ಮತ್ತು ಕಾಲಾವಧಿ**

- 18 ರಿಂದ 35 ವರ್ಷದ ವಯೋಮಾನದವರು ಯೋಜನೆಯ ಫಲಾನುಭವಿಗಳಾಗಲು ಅರ್ಹತೆಯನ್ನು ಹೊಂದಿರುತ್ತಾರೆ
- ಯೋಜನೆಯ ಕಾಲಾವಧಿ 5 ವರ್ಷಗಳಾಗಿರುತ್ತದೆ
- ಪ್ರತಿ ಗ್ರಾಮ ಪಂಚಾಯತಿಯಿಂದ 40–50 ಯುವಕ/ಯುವತಿಯರನ್ನು ಪ್ರತಿ ವರ್ಷ ಆಯ್ಕೆ ಮಾಡಲಾಗುತ್ತದೆ.
- 5 ವರ್ಷಗಳಲ್ಲಿ ಒಟ್ಟು 10 ಲಕ್ಷ ಯುವಕ/ಯುವತಿಯರಿಗೆ ಸ್ವ – ಉದ್ಯೋಗ ಕೈಗೊಳ್ಳಲು ಬೆಂಬಲ ನೀಡುವುದು

**ಅನುಷ್ಠಾನ ಕಾರ್ಯತಂತ್ರ**

- **ಗ್ರಾಮ ಮಟ್ಟದಲ್ಲಿ ಅರ್ಹ ಯುವಕ/ಯುವತಿಯರ ಸಭೆಗಳ ಆಯೋಜನೆ:**
  - ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪೂರ್ವಬಾವಿ ಸಭೆಗಳನ್ನು ನಡೆಸುವುದು
  - ಯೋಜನೆಯ ಕುರಿತು ಸಮಗ್ರ ಮಾಹಿತಿ ನೀಡುವುದು
  - ಗ್ರಾಪಂ ಸದಸ್ಯರು ಮತ್ತು ಅಧಿಕಾರಿಗಳು ಭಾಗವಹಿಸಬೇಕು
- **ಫಲಾನುಭವಿಗಳ ಆಯ್ಕೆಗಾಗಿ ಗ್ರಾಮ ಸಭೆ ಆಯೋಜನೆ**

**ಆಯ್ಕೆಯಾದ ಯುವಜನರಿಗೆ ಪ್ರಥಮ ಹಂತದ ತರಬೇತಿ**

- ಗ್ರಾಮ ಪಂಚಾಯತಿ / ಗ್ರಾಮ ಮಟ್ಟದಲ್ಲಿ ಅರ್ಹ ಯುವಕ/ಯುವತಿಯರುಗಳಿಗೆ 2 ದಿನಗಳ ಉದ್ಯಮಶೀಲತಾ ತರಬೇತಿ
- ತರಬೇತಿಯಲ್ಲಿ ಯೋಜನೆಗೆ ಸಂಬಂಧಿಸಿದಂತೆ ಸ್ವಯಂ ಉದ್ಯೋಗ ಚಟುವಟಿಕೆಗಳ ಕುರಿತು ಮಾಹಿತಿ ನೀಡುವುದು
- ಎರಡನೆಯ ಆದ್ಯತಾ ವಲಯದಲ್ಲಿ ವೃತ್ತಿ ಕೌಶಲ್ಯ ಪಡೆದು ಕೆಲಸ/ಉದ್ಯೋಗ/ನೌಕರಿ ಬಯಸುವ ಯುವಕರಿಗೆ ಸಮಗ್ರ ಮಾಹಿತಿ ನೀಡುವುದು ಮತ್ತು ಆಯ್ಕೆ ಮಾಡಿಕೊಳ್ಳಲು ಮಾರ್ಗದರ್ಶನ ನೀಡುವುದು

**17. ಕೃಷಿಕ ಮಹಿಳಾ ಸಶಕ್ತೀಕರಣ**

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂಕೆಎಸ್‌ಪಿ)**

ಕೃಷಿ ಅವಲಂಬಿತ ಗ್ರಾಮೀಣ ಮಹಿಳೆಯರ ಪ್ರಸ್ತುತ ಸ್ಥಿತಿಯಲ್ಲಿ ಸುಧಾರಣೆ ತರಲು ಮತ್ತು ಕೃಷಿ ಚಟುವಟಿಕೆಗಳಲ್ಲಿ ಅವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಮಹಿಳಾ ಕಿಸಾನ್ ಸಶಕ್ತೀಕರಣ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಉಪ ಯೋಜನೆಯಾಗಿ ಘೋಷಿಸಿದೆ. ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಭಾಗದ ರೈತ ಮಹಿಳೆಯರ ಸ್ವಸಹಾಯ ಗುಂಪುಗಳನ್ನು ರಚಿಸಲು ಹೆಚ್ಚಿನ ಗಮನ ನೀಡುತ್ತದೆ. ಅಲ್ಲದೆ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡಿ ಸಾಮರ್ಥ್ಯ ಅಭಿವೃದ್ಧಿ ಪಡಿಸಲು ನೆರವು ನೀಡಲಿದೆ.

**ಯೋಜನೆಯ ಉದ್ದೇಶಗಳು ಈ ಕೆಳಗಿನಂತಿವೆ :**

- ಗ್ರಾಮೀಣ ಭಾಗದ ಮಹಿಳೆಯರ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ಸೃಜಿಸುವುದು ಮತ್ತು ಬಲಪಡಿಸುವುದು
- ವ್ಯವಸ್ಥಿತ ಹೂಡಿಕೆಗಳ ಮೂಲಕ ಕೃಷಿ ಚಟುವಟಿಕೆಯಲ್ಲಿ ಭಾಗವಹಿಸುವಿಕೆಯನ್ನು ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು.
- ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಸಬಲೀಕರಣ ಮಾಡುವುದು

**ಕಾಲಾವಧಿ** : ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು 3 ವರ್ಷಗಳ ಕಾಲಾವಧಿಯನ್ನು ನಿಗದಿಪಡಿಸಿ ಯೋಜನೆಯ ಗುರಿಯನ್ನು ಸಾಧಿಸಲು ಕಾರ್ಯತಂತ್ರವನ್ನು ರೂಪಿಸಿದೆ.

**ನಿರ್ದಿಷ್ಟ ಗುರಿಗಳು :**

- ಕೃಷಿಯಲ್ಲಿ ತೊಡಗಿರುವ ಮಹಿಳೆಯರ ನಿವ್ವಳ ಆದಾಯದಲ್ಲಿ ಹೆಚ್ಚಳ
- ಕೃಷಿಯಲ್ಲಿ ತೊಡಗಿರುವ ಮಹಿಳೆಯರು ಮತ್ತು ಅವರ ಕುಟುಂಬಕ್ಕೆ ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆಯನ್ನು ಒದಗಿಸುವಲ್ಲಿ ಸುಧಾರಣೆ
- ತರಬೇತಿ, ಸಾಲ ಸೌಲಭ್ಯ, ತಂತ್ರಜ್ಞಾನ ಮತ್ತು ಮಾಹಿತಿಯ ಬೆಂಬಲದೊಂದಿಗೆ ಕೃಷಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವುದನ್ನು ಪ್ರೋತ್ಸಾಹಿಸುವುದು.
- ಸುಧಾರಿತ ಕೃಷಿ ಸಾಧನ ಮತ್ತು ಉಪಕರಣಗಳ ಬಳಕೆಯ ಮೂಲಕ ಕೃಷಿ ಚಟುವಟಿಕೆಯಲ್ಲಿ ಮಹಿಳೆಯರ ದೈಹಿಕ ಶ್ರಮವನ್ನು ಕಡಿಮೆ ಮಾಡುವುದು.
- ಮಹಿಳೆಯರ ಕೃಷಿ ಉತ್ಪನ್ನಗಳಿಗೆ ಸುಧಾರಿತ ಮಾರುಕಟ್ಟೆ ವ್ಯವಸ್ಥೆಯ ಕಲ್ಪಿಸುವುದು.
- ಕೃಷಿ ಆಧಾರಿತ ನಿರಂತರ ಜೀವನೋಪಾಯಕ್ಕಾಗಿ ಮಣ್ಣಿನ ಆರೋಗ್ಯ ಮತ್ತು ಫಲವತ್ತತೆಯ ಹೆಚ್ಚಳ
- ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಕೌಶಲ್ಯ ಮತ್ತು ಕಾರ್ಯನಿರ್ವಹಣೆಯಲ್ಲಿ ಸುಧಾರಣೆ
- ಕೃಷಿಯಲ್ಲಿ ಮಹಿಳೆಯರ ಹೆಚ್ಚಿನ ತೊಡಗುವಿಕೆಯಿಂದ ಕೃಷಿ ಮತ್ತು ಆಹಾರ ಉತ್ಪಾದನಾ ವಲಯದ ಸುಧಾರಣೆ.
- ಕೃಷಿ ಸಂಬಂಧಿಸಿದ ನೀತಿ ನಿರೂಪಣೆಯಲ್ಲಿ ಕೃಷಿಯಲ್ಲಿ ತೊಡಗಿರುವ ಮಹಿಳೆಯರ ಗುಂಪುಗಳು ಆಸಕ್ತಿದಾಯಕವಾಗಿ ಭಾಗವಹಿಸುವಂತೆ ಮಾಡುವುದು

**ಯೋಜನೆ ಅನುಷ್ಠಾನಕ್ಕೆ ಹಣಕಾಸಿನ ಮೂಲ :**

- ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಶೇ.75 ಅನುದಾನವನ್ನು ಹಾಗೂ ರಾಜ್ಯ ಸರ್ಕಾರ / ಯೋಜನಾ ಅನುಷ್ಠಾನ ಸಂಸ್ಥೆಯು ಶೇ.25 ರಷ್ಟು ಅನುದಾನವನ್ನು ಭರಿಸುತ್ತದೆ.
- ಅನುದಾನವನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. (25%+50%+25%)
- ಕೇಂದ್ರ / ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ಹಂಚಿಕೆಯನ್ನು ಪ್ರತಿ ಹಂತದಲ್ಲೂ ಸರಿಹೊಂದುವಂತೆ ಬಿಡುಗಡೆ ಮಾಡಬೇಕಾಗಿರುತ್ತದೆ.

**ಯೋಜನೆಯನ್ನು ಕೆಳಕಂಡ ಪ್ರಮುಖ ಅಂಶಗಳನ್ನಾಧರಿಸಿ ಕಾರ್ಯ ನಿರ್ವಹಿಸಬೇಕಿದೆ.**

- ಮಹಿಳೆಯರನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸುವ ನಿಟ್ಟಿನಲ್ಲಿ ಸ್ವಸಹಾಯ ಸಂಘ / ಒಕ್ಕೂಟ / ಮಹಿಳಾ ರೈತ ಸಂಘಟನೆಗಳನ್ನು ರಚಿಸಿ ಸಂಚಲನೆ ಮೂಡಿಸುವುದು.
- ಕೃಷಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಅನುಕೂಲತೆ ಕಲ್ಪಿಸುವ ನಿಟ್ಟಿನಲ್ಲಿ ಪೂರಕ ಆಸ್ತಿಗಳಿಗೆ (ಜಲಸಂವರ್ಧನೆ, ಭೂಮಿ ಇತ್ಯಾದಿ) ಪ್ರಾಮುಖ್ಯತೆ ನೀಡುವುದು.
- ಮಾರುಕಟ್ಟೆಯ ಜ್ಞಾನ, ಉತ್ಪಾದಿಸಿದ ವಸ್ತುಗಳಿಗೆ ಗ್ರಾಮ ಮಟ್ಟದಲ್ಲಿ ಮೌಲ್ಯವರ್ಧನೆ, ತರಬೇತಿ, ಕೃಷಿ ಕ್ಷೇತ್ರದಲ್ಲಿ ಕೌಶಲ್ಯ ಮತ್ತು ತಾಂತ್ರಿಕ ಪರಿಣಿತಿ ಹೊಂದುವಲ್ಲಿ, ರೈತ ತಂತ್ರಜ್ಞರೊಂದಿಗೆ ಭೇಟಿ, ಸಂವಾದ, ಪ್ರದರ್ಶನ, ಕ್ಷೇತ್ರ ಭೇಟಿ ಹೊಂದುವಲ್ಲಿ ರೈತ ಮಹಿಳೆಯನ್ನು ಭಾಗಿಯಾಗಿಸುವುದು.

## 18. ಕೌಶಲ್ಯಾಭಿವೃದ್ಧಿ ತರಬೇತಿ

ಈ ಯೋಜನೆಯು ಸಮಗ್ರ ಯೋಜನೆಯಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಸ್ವ ಸಹಾಯ ಗುಂಪುಗಳಾಗಿ ಸಂಘಟಿಸುವುದು, ತರಬೇತಿ ಮತ್ತು ತಾಂತ್ರಿಕತೆ, ಕೌಶಲ್ಯಗಳ ಅಭಿವೃದ್ಧಿ, ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದಾಗಿದೆ.

**ಗ್ರಾಮೀಣ ಯುವಜನತೆಗೆ ಉದ್ಯೋಗದ ಅವಶ್ಯಕತೆ**

- ಅವರ ಮೂಲ ಸ್ಥಳದಲ್ಲಿಯೇ ಸ್ಥಿರವಾದ ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಕಷ್ಟಸಾಧ್ಯವಾಗಿರುವುದರಿಂದ ಸ್ವ ಉದ್ಯೋಗ ಸೃಷ್ಟಿಸುವುದು
- ನಿರುದ್ಯೋಗಿ ಯುವ ಜನರ ಕುಟುಂಬಗಳಲ್ಲಿ ಆರ್ಥಿಕ ಬಿಕ್ಕಟ್ಟಿನ ನಿವಾರಣೆ
- ಅನಾರೋಗ್ಯ ಮತ್ತು ಖಿನ್ನತೆಯಿಂದ ಹೊರಬರಲು ಆತ್ಮವಿಶ್ವಾಸ ಮೂಡಿಸುತ್ತದೆ
- ಅಪರಾಧ ಚಟುವಟಿಕೆಗಳಲ್ಲಿ ತೊಡಗುವುದನ್ನು ತಪ್ಪಿಸುತ್ತದೆ
- ರಾಷ್ಟ್ರೀಯ ಆರ್ಥಿಕತೆಯ ಕುಂಟಿತವನ್ನು ತಪ್ಪಿಸುತ್ತದೆ

**ಯೋಜನೆಯ ಕಾರ್ಯತಂತ್ರ**

- ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ 75:25 ರ ಅನುಪಾತದಲ್ಲಿ ಅನುದಾನವನ್ನು ಭರಿಸುತ್ತದೆ
- ಸಾರ್ವಜನಿಕ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು
- ಯೋಜನೆಯಡಿ ಪಾಲುದಾರಿಕೆ ಹೊಂದಿರುವ ಸಂಘ ಸಂಸ್ಥೆಗಳು ಸರಳ ಪರೀಕ್ಷೆ / ಸಂದರ್ಶನ ನಡೆಸಿ ಯುವಕರನ್ನು ಆಯ್ಕೆ ಮಾಡಲಾಗುವುದು
- ಬಿಪಿಎಲ್ ಕುಟುಂಬದ 18–35 ವಯೋಮಾನದ ಯುವ ಜನರನ್ನು ಗುರುತಿಸಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಮತ್ತು ಆಸಕ್ತಿಗನುಗುಣವಾಗಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು
- ಅನುಷ್ಠಾನ ಮಾಡುವ ಸಂಸ್ಥೆ ಶೇ.50 ರಷ್ಟು ಎಸ್‌ಸಿ & ಎಸ್‌ಟಿ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು
- ಮಹಿಳೆ, ಅಲ್ಪಸಂಖ್ಯಾತರು, ವಿಕಲಚೇತನರು ಮತ್ತು ಹಿಂದುಳಿದ ವರ್ಗಕ್ಕೆ ಆದ್ಯತೆ ನೀಡಬೇಕು
- ತರಬೇತಿಯಲ್ಲಿ ಆಂಗ್ಲ ಭಾಷೆ, ಸಾಮಾಜಿಕ/ವ್ಯಕ್ತಿತ್ವ ವಿಕಸನ & ಕಂಪ್ಯೂಟರ್ ಜ್ಞಾನದ ಬಗ್ಗೆ ತರಬೇತಿ ನೀಡಬೇಕು
- ಪ್ರತಿದಿನದ ಊಟ & ಪ್ರಯಾಣ ಭತ್ಯೆಗಾಗಿ ರೂ.100/–ನ್ನು ದಿನಭತ್ಯೆಯಾಗಿ ಉಳಿತಾಯ ಖಾತೆಗೆ ಜಮಾ ಮಾಡಲಾಗುವುದು
- ದೂರದ ಅಭ್ಯರ್ಥಿಗಳಿಗೆ ಉಚಿತ ವಸತಿ ಸೌಕರ್ಯ ಕಲ್ಪಿಸುವುದು

**ಯೋಜನೆಯಡಿ ನೀಡಬಹುದಾದ ಕೆಲವು ಚಟುವಟಿಕೆಗಳು**

- ಸಣ್ಣ ವ್ಯಾಪಾರ
- ಹೊಲಿಗೆ ತರಬೇತಿ
- ಸಿದ್ದ ಉಡುಪು ವಿನ್ಯಾಸ & ತಯಾರಿಕೆ
- ಭದ್ರತಾ ಸಿಬ್ಬಂದಿ ತರಬೇತಿ
- ಶುಶ್ರೂಷಾ ತರಬೇತಿ
- ಸ್ವಚ್ಛತಾ ತರಬೇತಿ
- ವೆಲ್ಡಿಂಗ್
- ಕಂಪ್ಯೂಟರ್ ತರಬೇತಿ
- ಮರಗೆಲಸ, ಕಟ್ಟಡ ನಿರ್ಮಾಣ ಮತ್ತು ಗಾರೆ ಕೆಲಸ
- ಗೃಹೋಪಯೋಗಿ ವಸ್ತುಗಳ ದುರಸ್ತಿ
- ತೆಂಗಿನ ಮರ ಏರುವ ತರಬೇತಿ

ತರಬೇತಿಯ ಅವಧಿ ಕನಿಷ್ಠ 3 ತಿಂಗಳಿಂದ ಗರಿಷ್ಠ 12 ತಿಂಗಳು

**ಯೋಜನೆಯ ಅನುಷ್ಠಾನ**

- ಯೋಜನೆಯು ರಾಜ್ಯಾದ್ಯಂತ ಜಾರಿಯಲ್ಲಿದೆ
- ಯೋಜನೆಯ ಅವಧಿ : 1 ವರ್ಷದಿಂದ 3 ವರ್ಷಗಳು
- ಯೋಜನಾ ವೆಚ್ಚ : ಕನಿಷ್ಠ 1 ಕೋಟಿಯಿಂದ ಗರಿಷ್ಠ 50 ಕೋಟಿಗಳು
- ನೈಪುಣ್ಯತೆ ಹೊಂದಿರುವ ಸಂಘ ಸಂಸ್ಥೆಗಳು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿಯ ಮಾರ್ಗಸೂಚಿಯಂತೆ ಪ್ರಸ್ತಾವನೆಯನ್ನು ಸಲ್ಲಿಸಬೇಕು
- ಆಯ್ಕೆಯಾದ ಸಂಘ ಸಂಸ್ಥೆಗಳು ಅಭ್ಯರ್ಥಿಗಳಿಗೆ ತರಬೇತಿ & ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು

**ಪಂಚಾಯತ್ ರಾಜ್ ಸಂಸ್ಥೆಗಳ ಜವಾಬ್ದಾರಿಗಳು**

- ವ್ಯಾಪಕ ಪ್ರಚಾರ
- ತರಬೇತಿಗೆ ಆಸಕ್ತಿಯಿರುವ ಅಭ್ಯರ್ಥಿಗಳ ಸಮೀಕ್ಷೆ ಮತ್ತು ಪಟ್ಟಿ ತಯಾರಿಕೆ
- ವಿವಿಧ ವೃತ್ತಿ ತರಬೇತಿ ವಿವರಗಳ ಮಾಹಿತಿ ನೀಡುವುದು
- ಅಭ್ಯರ್ಥಿಗಳಿಂದ ಅರ್ಜಿ ಪಡೆಯುವುದು
- ಅಭ್ಯರ್ಥಿಗಳ ಸಂದರ್ಶನ
- ಗ್ರಾಮ ಸಭೆಯಲ್ಲಿ ಸೂಕ್ತ ಅಭ್ಯರ್ಥಿಗಳ ಆಯ್ಕೆ ಹಾಗೂ ಗ್ರಾ.ಪಂ. ಸಭೆಯಲ್ಲಿ ಒಪ್ಪಿಗೆ & ದೃಢೀಕರಣ
- ಅಭ್ಯರ್ಥಿಗಳ ಪೋಷಕರಿಗೆ ತಿಳುವಳಿಕೆ ಹಾಗೂ ಅವರಿಂದ ಒಪ್ಪಿಗೆ
- ಅಭ್ಯರ್ಥಿಗಳು ತರಬೇತಿಯಲ್ಲಿ ಭಾಗವಹಿಸುವಿಕೆಯ ಕುರಿತು ಅನುಸರಣೆ
- ಕೆಲಸ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ಧನ ನೀಡುತ್ತಿರುವುದನ್ನು ಖಚಿತ ಪಡಿಸಿಕೊಳ್ಳುವುದು

**19. ಶುದ್ಧ ಕುಡಿಯುವ ನೀರಿನ ಘಟಕಗಳು**

ರಾಜ್ಯದಲ್ಲಿ 59753 ಜನವಸತಿಗಳಿರುತ್ತವೆ. ಈ ಜನವಸತಿಗಳಿಗೆ ಕುಡಿಯುವ ನೀರನ್ನು ಕೊಳವೆಬಾವಿಗಳನ್ನು ಕೊರೆದು ನಳ/ಕೊಳಾಯಿ ನೀರು ಸರಬರಾಜು, ಕಿರು ನೀರು ಸರಬರಾಜು, ಕೊಳವೆ ಬಾವಿ ಕೈಪಂಪು ನೀರು ಸರಬರಾಜುಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಕೊಳವೆ ಬಾವಿಗಳನ್ನು ಜಲಮೂಲವಾಗಿ ಪರಿಗಣಿಸಿದಾಗ, ಇದರಲ್ಲಿ ರಾಸಾಯನಿಕ ಕಲುಷಿತೆಯನ್ನು ಹೊಂದಿರುತ್ತದೆ. ಈ ರಾಸಾಯನಿಕ ಕಲುಷಿತೆಯು ಫ್ಲೋರೈಡ್, ಕಬ್ಬಿಣಾಂಶ, ನೈಟ್ರೇಟ್, ಆರ್ಸೆನಿಕ್ ಗಡಸುತನವನ್ನು ಹೊಂದಿರುತ್ತವೆ.

ರಾಸಾಯನಿಕಗಳಿಂದ ಕಲುಷಿತಗೊಂಡ ನೀರನ್ನು ಕುಡಿಯುವುದರಿಂದ ಫ್ಲೋರೋಸಿಸ್, ಬ್ಲೂಬೇಬಿ ಸಿಂಡ್ರೋಮ್, ಅರ್ಸೆನಿಕ್‌ನಿಂದ ಕ್ಯಾನ್ಸರ್, ಚರ್ಮ ರೋಗ ಮುಂತಾದ ಕಾಯಿಲೆಗಳು ಬರುತ್ತವೆ. ಈ ರಾಸಾಯನಿಕಗಳು ಃಖಘ–10500–2012 ರಲ್ಲಿ ನಿಗದಿಪಡಿಸಿರುವ ಮಿತಿಯಲ್ಲಿ ಇರಬೇಕಾಗುತ್ತದೆ. ಆದುದರಿಂದ, ಮಿತಿಗಿಂತ ಹೆಚ್ಚಾಗಿರುವ ರಾಸಾಯನಿಕ ಅಂಶಗಳನ್ನು ತೆಗೆಯಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮಕೈಗೊಳ್ಳಬೇಕಾಗಿದೆ.

**ಸದ್ಯದ ಪರಿಸ್ಥಿತಿ :**

ಮೇಲ್ಮೈ ಜಲಮೂಲ ಲಭ್ಯತೆಯಿರುವ ಕಡೆಗಳಲ್ಲಿ ನದಿ, ಕಾಲುವೆ, ಕೆರೆಗಳನ್ನು ಉಪಯೋಗಿಸಿಕೊಂಡು, ಅವುಗಳ ನೀರನ್ನು ಶುದ್ಧೀಕರಿಸಿ ರಾಸಾಯನಿಕ ಕಲುಷಿತ ಹೊಂದಿರುವ ಜನವಸತಿಗಳಿಗೆ ನೀಡಲು 365 ಬಹುಗ್ರಾಮ ಯೋಜನೆಗಳನ್ನು ರಾಜ್ಯದಲ್ಲಿ ರೂಪಿಸಲಾಗಿದೆ. ಮೇಲ್ಮೈ ಜಲಮೂಲಗಳು ಇಲ್ಲದ ಜಿಲ್ಲೆಗಳಲ್ಲಿ ಅಂತರ್ಜಲವನ್ನೇ ಅವಲಂಬಿಸಬೇಕಾಗಿದ್ದು, ಕುಡಿಯುವ ನೀರಿನಲ್ಲಿರುವ ರಾಸಾಯನಿಕಗಳನ್ನು ತೆಗೆಯಲು ಶುದ್ಧ ಕುಡಿಯುವ ನೀರಿನ ಘಟಕಗಳ ಅವಶ್ಯಕತೆಯಿರುತ್ತದೆ. ರಾಸಾಯನಿಕ ನೀರನ್ನು ಕುಡಿದು ಜನರ ಆರೋಗ್ಯದ ಮೇಲಾಗುವ ದುಷ್ಪರಿಣಾಮವನ್ನು ತಡೆಯಲು ಶುದ್ಧ ನೀರಿನ ಘಟಕಗಳನ್ನು ಅಂತಹ ಜನವಸತಿಗಳಲ್ಲಿ ಅಳವಡಿಸಬೇಕಾಗುತ್ತದೆ.

**ನೀರಿನ ಮಾಲಿನ್ಯಗಳು**

| ತೇಲಾಡುತ್ತಿರುವ ಕಣಗಳು | ಸೂಕ್ಷ್ಮ ಜೀವಿಗಳು | ಲವಣ ಹಾಗೂ ಶೇಷಾತ್ಮಕಗಳು |
|---|---|---|
| ಕೋಲಾಯ್ಡಲ್ | ಪ್ರೋಟೋಜೋವಾ | ಕ್ರಿಮಿನಾಶಕ ಶೇಷಗಳು |
| | ಪರಾವಲಂಬಿ ಜೀವಿಗಳು | ಸಸ್ಯ ಪೋಷಕಾಂಶಗಳು |
| | ಬ್ಯಾಕ್ಟೇರಿಯಾಗಳು | ಜಿಡ್ಡುಗಳು |
| | ವೈರಸ್ | ಫ್ಲೋರೈಡ್ |
| | | ಆರ್ಸೆನಿಕ್ |
| | | ಭಾರದ ಲೋಹಗಳು |
| | | ನೈಟ್ರೇಟ್‌ಗಳು |

ಕಲುಷಿತ ನೀರು ಕುಡಿಯುವುದರಿಂದ ಸಾಮಾನ್ಯವಾಗಿ ಈ ಕೆಳಗಿನ ರೋಗಗಳು ಕಾಣಿಸಿಕೊಳ್ಳುವವು

- ಕಾಲರಾ
- ಬ್ಯಾಸಿಲರಿ ಎಸೆಂಟರಿ (ಆಮಶಂಕೆ)
- ಟೈಫಾಯಿಡ್
- ಆಮೀಬಿಯಾಸಿಸ್
- ಸಂಧಿವಾತ
- ಅಕಾಲಿಕ ಮುಪ್ಪು
- ಗ್ಯಾಸ್ಟ್ರೋಎಂಟರೈಟಿಸ್ (ಬೇಧಿ)
- ಕಾಮಾಲೆ
- ಜಿಯಾರ್ಡಿಯಾಸಿಸ್
- ಹಲ್ಲು ಹಳದಿ ಬಣ್ಣದ್ದಾಗುವುದು
- ಎಲುವು – ಕೀಲು ನೋವು
- ಇತರೆ ಚರ್ಮ ರೋಗಗಳು

ದುಡಿಯುವ ವ್ಯಕ್ತಿ ಕೆಲಸ ಮಾಡದಂತಹ ಸ್ಥಿತಿ ನಿರ್ಮಾಣವಾಗಿ ಮಾನವ ದಿನಗಳ ನಷ್ಟದಿಂದಾಗಿ ಕುಟುಂಬ ಆರ್ಥಿಕ ತೊಂದರೆಗೆ ಸಿಲುಕುವುದಲ್ಲದೆ ದೇಶದ ಉತ್ಪಾದನೆ ಕುಂಠಿತಗೊಳ್ಳುವುದು.

**ಯೋಜನೆಯ ಅನುಷ್ಟಾನ ಮತ್ತು ಪಾರದರ್ಶಕತೆ :**

- ಕುಡಿಯುವ ನೀರಿನ ಘಟಕಗಳನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿಯಲ್ಲಿ ವೆಚ್ಚ ಭರಿಸಿ ಅನುಷ್ಠಾನಗೊಳಿಸಲಾಗುವುದು.
- ವರ್ಷ ಪೂರ್ತಿ ಶುದ್ಧ ಕುಡಿಯುವ ನೀರು ಒದಗಿಸುವಲ್ಲಿ ಆರ್ಸೆನಿಕ್, ಫ್ಲೋರೈಡ್, ಅಧಿಕ ಪ್ರಮಾಣದ ಟಿ.ಡಿ.ಎಸ್, ನೈಟ್ರೇಟ್, ಕಬ್ಬಿಣ, ಸತು, ಭಾರವಾದ ಲೋಹ ಪದಾರ್ಥಗಳಿಂದ ರಾಸಾಯನಿಕ ಹಾಗೂ ಬ್ಯಾಕ್ಟೀರಿಯಾ ಕಲ್ಮಶಗಳು ನಿಗದಿತ ಪ್ರಮಾಣ ಮೀರಿದಂತಹ ಗ್ರಾಮೀಣ ಜನ ವಸತಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರವು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ನಿರ್ಮಿಸಿ, ನಿರ್ವಹಿಸಿ, ಹಸ್ತಾಂತರಿಸುವ ಆಧಾರದಲ್ಲಿ ಘಟಕಗಳನ್ನು ಸ್ಥಾಪಿಸಲಿದೆ.

- ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡ್, ಆರ್ಸೆನಿಕ್ ಹಾಗೂ ಇತರೆ ಕಲುಷಿತ ನೀರನ್ನು ಹೊಂದಿರುವ ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ ಒಂದು ಸಾವಿರ ನೀರು ಶುದ್ಧೀಕರಣ ಘಟಕಗಳನ್ನು ಕರ್ನಾಟಕ ಪಾರದರ್ಶಕ ನಿಯಮಗಳನ್ವಯ ಸ್ಥಾಪಿಸಲಾಗುವುದು.

- ಗ್ರಾಮೀಣ ಜನತೆ ನೇರವಾಗಿ ಒಂದು ರೂಪಾಯಿಯ ನಾಣ್ಯವನ್ನು ಹಾಕುವ ಮೂಲಕ ಸ್ವಯಂಚಾಲಿತ ಶುದ್ಧ ನೀರು ವಿತರಿಸುವ ಯಂತ್ರದಿಂದ 10 ಲೀಟರ್ ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳಬಹುದಾಗಿದೆ.

- ಜನಸಾಮಾನ್ಯರಿಗೆ ಲೀಟರ್‌ಗೆ 10 ಪೈಸೆಯಂತೆ ಶುದ್ಧೀಕರಿಸಿದ ನೀರನ್ನು ಪೂರೈಸಲಾಗುವುದು. ಆದಾಗ್ಯೂ ಲೀಟರ್‌ಗೆ ರೂ.10 ಪೈಸೆ ದರವನ್ನು 2ನೇ ವರ್ಷಾಂತ್ಯದಲ್ಲಿ ಹಾಗೂ 4ನೇ ವರ್ಷಾಂತ್ಯದಲ್ಲಿ ಪರಿಷ್ಕರಿಸಲಾಗುವುದು.

- ಗ್ರಾಮ ಪಂಚಾಯಿತಿ / ಸಹಕಾರ ಸಂಘ / ಸೇವಾಸಂಸ್ಥೆ ನಿಗದಿತ ಜನವಸತಿಗಳಲ್ಲಿ ಕಟ್ಟಡವನ್ನು ಒದಗಿಸುತ್ತದೆ. ಹಾಗೂ ಶುದ್ಧೀಕರಿಸಲು ಬೇಕಾಗುವ ಕಚ್ಚಾ ನೀರನ್ನು ಉಚಿತವಾಗಿ ಒದಗಿಸುತ್ತದೆ. ಹಾಗೂ ಘಟಕಕ್ಕೆ ಅವಶ್ಯವಿರುವ 6 ಘಂಟೆಗಳ ಕಾಲ 3-Phase ವಿದ್ಯುತ್ / Single phase ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

- ತ್ಯಾಜ್ಯ ನೀರಿನ ಸುರಕ್ಷಿತ ವಿಲೇವಾರಿ ಹಾಗೂ ಸಂಸ್ಕರಣೆ ಮಾಡಿದ ನೀರಿನ ಮರುಬಳಕೆ ಕುರಿತು ಜಾಗ್ರತೆ ವಹಿಸುವುದು ಅವಶ್ಯ. ಶುದ್ಧ ನೀರಿನ ಮಹತ್ವ, ಗುಣಮಟ್ಟ, ಘಟಕಗಳ ಬಗೆಗೆ ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳಲಾಗುವುದು.

**ಯೋಜನೆಯ ಅವಧಿ :**

ಕಾರ್ಯಾದೇಶ ನೀಡಿದ ನಂತರ ಶುದ್ಧೀಕರಣ ಘಟಕಗಳನ್ನು ಅಳವಡಿಸಲು 3 ತಿಂಗಳುಗಳ ಅವಧಿಯನ್ನು ನೀಡಲಾಗಿದೆ. ತದನಂತರದಲ್ಲಿ 7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಜವಾಬ್ದಾರಿ ಯೊಂದಿಗೆ ಸರ್ಕಾರವು ಅರ್ಹ ಸಂಸ್ಥೆಗಳಿಗೆ ಈ ಜವಾಬ್ದಾರಿಯನ್ನು ನೀಡಲಿದೆ. ಕಾರ್ಯಾನುಷ್ಠಾನದ ವಿವರಗಳನ್ನು ಅನುಬಂಧ–4ರಲ್ಲಿ ನೀಡಲಾಗಿದೆ.

## 20. ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ

ಇಂದಿನ ದಿನಗಳಲ್ಲಿ ಜಗತ್ತೇ ಒಂದು ಗ್ರಾಮವಾಗಿ ಮಾರ್ಪಟ್ಟಿದೆ. ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂವಹನ ಮಾಡಲು ಅನುಕೂಲವಿರುತ್ತದೆ. ಗ್ರಾಮೀಣ ಪ್ರದೇಶದ ಯುವಕರು ವಿದ್ಯಾವಂತರಾಗಿ ದೇಶದ ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅಂತೆಯೇ ವಿದೇಶಗಳಲ್ಲೂ ನೆಲೆಸಿರುವುದೂ ಉಂಟು. ಈ ಉದ್ಯೋಗಸ್ತರೊಂದಿಗೆ ಅವರ ಕುಟುಂಬದವರು, ಬಂಧು ಬಳಗದವರು, ಸ್ನೇಹಿತರು ಸಂವಹನ ಮಾಡಲು ಅನುಕೂಲವಾಗುವಂತೆ ಸೈಬರ್ ಕೆಫೆಗಳನ್ನು ಮತ್ತು ಕಂಪ್ಯೂಟರ್ ಕೇಂದ್ರಗಳನ್ನು ಸ್ಥಾಪಿಸಿ ಅವರಿಗೆ ಅತಿ ಕಡಿಮೆ ವೆಚ್ಚದಲ್ಲಿ ಕಂಪ್ಯೂಟರ್ ಕಲಿಕೆ ಹಾಗೂ ಗ್ರಾಮೀಣ ಮಕ್ಕಳಿಗೆ ವಿಡಿಯೋ ಗೇಮ್ಸ್ ಮತ್ತು ಇನ್ನಿತರ ತಂತ್ರಾಂಶಗಳ ಬಳಕೆಗೆ ನೆರವಾಗುವ ಘನ ಉದ್ದೇಶ ಕಾರ್ಯಕ್ರಮವೊಂದನ್ನು ರೂಪಿಸಿದೆ.

## 21. ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ

ಗ್ರಾಮೀಣ ಪ್ರದೇಶಗಳು ಜನಪದ ಕಲೆಗಳ ತೌರೂರು. ಅದ್ಭುತ ಕಲೆಗಾರರು ಗ್ರಾಮಗಳಲ್ಲಿದ್ದು ಬೆಳಕಿಗೆ ಬಾರದೆ ಹೋಗಿಬಿಡುತ್ತಾರೆ. ಕಲೆ ನಶಿಸಿ ಹೋಗುತ್ತದೆ. ಅವರ ಕಲಾ ಪ್ರಕಾರಗಳನ್ನು ಒಂದು ಪ್ರದರ್ಶನ ವೇದಿಕೆಯನ್ನು ಒದಗಿಸಲು ಯೋಚಿಸಿ ಆಯ್ದ ಗ್ರಾಮಗಳಲ್ಲಿ ಸಾಂಸ್ಕೃತಿಕ ಕೇಂದ್ರಗಳನ್ನು ತೆರೆಯಲು ಹಾಗೂ ಜನಪದ ಕಲಾಕಾರರುಗಳನ್ನು ಒಟ್ಟುಗೂಡಿಸಿ ಅವರ ಕಲೆಯ ಪುನರುಜ್ಜೀವನ ಕಾರ್ಯವನ್ನು ಕೈಗೊಳ್ಳಲು ಕಾರ್ಯಕ್ರಮವೊಂದನ್ನು ರೂಪಿಸಿದೆ.